
# ಕನ್ನಡ ನುಡಿ

ಆಗಸ್ಟ್ ೨೦೨೦ – ಜನವರಿ ೨೦೨೧



## ೮೬ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾದ

# ಡಾ. ದೊಡ್ಡರಂಗೇಗೌಡ

**ವಿಶೇಷ ಸಂದರ್ಶನ ಹಾಗೂ ಲೇಖನ**



ಕೇಂದ್ರ ಸರ್ಕಾರ ನೀಡುವ ಪ್ರತಿಷ್ಠಿತ ಪದ್ಮಭೂಷಣ ಪ್ರಶಸ್ತಿಗೆ ಆಯ್ಕೆಯಾದ ಹಿರಿಯ ಸಾಹಿತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷರೂ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರೂ ಆದ ನಾಡೋಜ ಡಾ. ಚಂದ್ರಶೇಖರ ಕಂಬಾರ ಅವರನ್ನು ನಾಡೋಜ ಡಾ. ಮನು ಬಳಿಗಾರ್ ಅವರು ಕ.ಸಾ.ಪ. ವತಿಯಿಂದ ಅಭಿನಂದಿಸಿದರು. ಗೌರವ ಕೋಶಾಧ್ಯಕ್ಷರಾದ ಶ್ರೀ ಪಿ. ಮಲ್ಲಿಕಾರ್ಜುನಪ್ಪ ಅವರು ಉಪಸ್ಥಿತರಿದ್ದರು.



ಕನ್ನಡ ಸಾಹಿತ್ಯ ಪರಿಷತ್ತು ನೀಡುವ "ಪ್ರೊ. ಸಿ.ಹೆಚ್. ಮರಿದೇವರು ಪ್ರತಿಷ್ಠಾನ ದತ್ತಿ ಪ್ರಶಸ್ತಿ"ಯನ್ನು ಶಿಕ್ಷಣ ಕ್ಷೇತ್ರಕ್ಕೆ ಪ್ರೊ. ತೇಜಸ್ವಿ ವಿ. ಕಟ್ಟೀಮನಿ, ಕಲೆ ಮತ್ತು ರಂಗಭೂಮಿ ಕ್ಷೇತ್ರಕ್ಕೆ ಶ್ರೀ ಹೆಚ್.ಜಿ. ದತ್ತಾತ್ರೇಯ, ಸಾಹಿತ್ಯ ಕ್ಷೇತ್ರಕ್ಕೆ ಡಾ. ಕೆ.ಎನ್. ಲಾವಣ್ಯಪ್ರಭ, ಕೃಷಿ ಹಾಗೂ ನೀರಾವರಿ ಕ್ಷೇತ್ರಕ್ಕೆ ಶ್ರೀ ಬಸವರಾಜ ಸಂತೆಶಿವರ ಹಾಗೂ ಕನ್ನಡ ಸೇವೆಗೆ ಶ್ರೀಮತಿ ಶೈಲಾ ನಾಗರಾಜ್ ಅವರಿಗೆ ಪ್ರದಾನ ಮಾಡಲಾಯಿತು. ಕ.ಸಾ.ಪ. ಅಧ್ಯಕ್ಷರಾದ ನಾಡೋಜ ಡಾ. ಮನು ಬಳಿಗಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ, ಗೌರವ ಕಾರ್ಯದರ್ಶಿ ಶ್ರೀ ಕೆ. ರಾಜಕುಮಾರ್ ಅವರೊಂದಿಗೆ ಗಣ್ಯರು ಉಪಸ್ಥಿತರಿದ್ದರು.

## ಕನ್ನಡ ಸಾಹಿತ್ಯ ಪರಿಷತ್ತಿನ ೧೦೬ನೆಯ ವಾರ್ಷಿಕಾಧಿವೇಶನ

# ಸರ್ವ ಸದಸ್ಯರ ಮಹಾಸಭೆಯ ತಿಳಿವಳಿಕೆ ಪತ್ರ



ನಾಗಡಿಕೆರೆ-ಕಿಟ್ಟಪ್ಪಗೌಡ ರುಕ್ಮಿಣಿ ತೀರ್ಥಹಳ್ಳಿ ದತ್ತಿ ಪ್ರಶಸ್ತಿಯನ್ನು ಖ್ಯಾತ ಪತ್ರಕರ್ತ ಹರಿಪ್ರಕಾಶ ಕೋಣೆಮನೆ ಅವರಿಗೆ ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ವೇಣುಗೋಪಾಲ್ ಅವರು ಪ್ರದಾನ ಮಾಡಿದರು. ಅಧ್ಯಕ್ಷರಾದ ನಾಡೋಜ ಡಾ. ಮನು ಬಳಿಗಾರ್, ಗೌರವ ಕಾರ್ಯದರ್ಶಿ ಶ್ರೀ ಕೆ. ರಾಜಕುಮಾರ್ ಹಾಗೂ ಸಂಶೋಧನಾ ವಿಭಾಗದ ಸಂಚಾಲಕ ಡಾ. ಚಿತ್ತಯ್ಯ ಪೂಜಾರ್ ಅವರು ಉಪಸ್ಥಿತರಿದ್ದರು.



ಹಿರಿಯ ಸಾಹಿತಿ ಡಾ. ಬಾಳಾ ಸಾಹೇಬ ಲೋಕಾಪುರ ಅವರಿಗೆ ಪ್ರತಿಷ್ಠಿತ ಚಾವುಂಡರಾಯ ದತ್ತಿ ಪ್ರಶಸ್ತಿಯನ್ನು ಹಿರಿಯ ವಿದ್ವಾಂಸರಾದ ಡಾ. ಹಂಪ ನಾಗರಾಜಯ್ಯ ಅವರು ಪ್ರದಾನ ಮಾಡಿದರು. ಅಧ್ಯಕ್ಷರಾದ ನಾಡೋಜ ಡಾ. ಮನು ಬಳಿಗಾರ್, ಗೌರವ ಕಾರ್ಯದರ್ಶಿ ಶ್ರೀ ಕೆ. ರಾಜಕುಮಾರ್ ಹಾಗೂ ಲೇಖಕಿ ಡಾ. ಪದ್ಮಿನಿ ನಾಗರಾಜು ಅವರುಗಳು ಉಪಸ್ಥಿತರಿದ್ದರು.



ಅತ್ಯುತ್ತಮ ಪ್ರಕಾಶನ ಸಂಸ್ಥೆಗೆ ನೀಡುವ ಅಂಕಿತ ಪುಸ್ತಕ ಪುರಸ್ಕಾರಕ್ಕೆ ಹುಬ್ಬಳ್ಳಿಯ ಸಾಹಿತ್ಯ ಪ್ರಕಾಶನವು ಭಾಜನವಾಗಿದ್ದು, ಸಂಸ್ಥೆಯ ಪರವಾಗಿ ಶ್ರೀ ಸುಬ್ರಹ್ಮಣ್ಯ ಅವರಿಗೆ ಪ್ರಶಸ್ತಿಯನ್ನು ಸಾರ್ವಜನಿಕ ಗ್ರಂಥಾಲಯದ ನಿರ್ದೇಶಕರಾದ ಶ್ರೀ ಸತೀಶ್ ಕುಮಾರ್ ಹೊಸಮನಿ ಅವರು ಪ್ರದಾನ ಮಾಡಿದರು. ಅಂಕಿತ ಪುಸ್ತಕದ ಮಾಲೀಕರಾದ ಶ್ರೀ ಪ್ರಕಾಶ ಕಂಬತ್ತಳ್ಳಿ, ಅಧ್ಯಕ್ಷರಾದ ನಾಡೋಜ ಡಾ. ಮನು ಬಳಿಗಾರ್, ಗೌರವ ಕಾರ್ಯದರ್ಶಿ ಶ್ರೀ ಕೆ. ರಾಜಕುಮಾರ್ ಭಾಗವಹಿಸಿದ್ದರು.



ಅಂತರರಾಷ್ಟ್ರೀಯ ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಕುಮಾರಿ ಜಿ.ಕೆ. ವಿಜಯಕುಮಾರಿ ಅವರಿಗೆ ಪ್ರೊ. ಸಿ.ಎಚ್. ಮರಿದೇವರು ಪ್ರತಿಷ್ಠಾನದ ದತ್ತಿ ಪ್ರಶಸ್ತಿಯನ್ನು ನಿವೃತ್ತ ವಿಶೇಷ ಜಿಲ್ಲಾಧಿಕಾರಿಗಳಾದ ಶ್ರೀ ಎನ್. ಕೆ. ನಾರಾಯಣ್ ಅವರು ಪ್ರದಾನ ಮಾಡಿದರು. ಅಧ್ಯಕ್ಷರಾದ ನಾಡೋಜ ಡಾ. ಮನು ಬಳಿಗಾರ್, ಗೌರವ ಕಾರ್ಯದರ್ಶಿ ಶ್ರೀ ಕೆ. ರಾಜಕುಮಾರ್ ಉಪಸ್ಥಿತರಿದ್ದರು.






೨೦೧೯-೨೦ನೇ ಸಾಲಿನ ಕನ್ನಡ ಸಾಹಿತ್ಯ ಪರಿಷತ್ತಿನ ಸಾಹಿತ್ಯ ಪರೀಕ್ಷೆಗಳು, ಶಾಸನಶಾಸ್ತ್ರ ಡಿಪ್ಲೊಮಾ ರ್‍ಯಾಂಕ್ ವಿಜೇತರಿಗೆ, ಪಿಎಚ್.ಡಿ. ಪದವಿ ಪಡೆದವರಿಗೆ ಹಾಗೂ ಎಸ್.ಎಸ್.ಎಲ್.ಸಿ., ಪಿ.ಯು.ಸಿ.ಯಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರವನ್ನು ಆಯೋಜಿಸಲಾಗಿತ್ತು. ಸಾಹಿತಿಗಳಾದ ಎಸ್. ದಿವಾಕರ್, ನಾಡೋಜ ಡಾ. ಮನು ಬಳಿಗಾರ್ ಅವರು ವಿದ್ಯಾರ್ಥಿಗಳನ್ನು ಪುರಸ್ಕರಿಸಿದರು. ಗೌರವ ಕಾರ್ಯದರ್ಶಿಗಳಾದ ಡಾ. ಪದ್ಮರಾಜ ದಂಡಾವತಿ, ಶ್ರೀ ಕೆ. ರಾಜಕುಮಾರ್, ಗೌರವ ಕೋಶಾಧ್ಯಕ್ಷರಾದ ಶ್ರೀ ಪಿ. ಮಲ್ಲಿಕಾರ್ಜುನಪ್ಪ ಅವರುಗಳು ಉಪಸ್ಥಿತರಿದ್ದರು.





ಸಾಹಿತ್ಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ್ದಕ್ಕಾಗಿ ಲೇಖಕಿಯರಾದ ಡಾ. ಪದ್ಮಿನಿ ನಾಗರಾಜು ಹಾಗೂ ಡಾ. ಕೆ. ಷರೀಫಾ ಅವರುಗಳಿಗೆ ಟಿ. ಶ್ರೀನಿವಾಸ ಸ್ಮರಣಾರ್ಥ ಪಿ.ಕೆ. ನಾರಾಯಣ ಸಾಹಿತ್ಯ ದತ್ತಿ ಪ್ರಶಸ್ತಿಯನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ. ಮನು ಬಳಿಗಾರ್ ಅವರು ಪ್ರದಾನ ಮಾಡಿದರು. ಗೌರವ ಕಾರ್ಯದರ್ಶಿಗಳಾದ ಶ್ರೀ ಕೆ. ರಾಜಕುಮಾರ್ ಉಪಸ್ಥಿತರಿದ್ದರು.

ಕನ್ನಡ ಸಾಹಿತ್ಯ ಪರಿಷತ್ತಿನ ಪ್ರತಿಷ್ಠಿತ ಪ್ರಶಸ್ತಿಯಾದ ಶ್ರೀ ವಿಜಯ ದತ್ತಿ ಪ್ರಶಸ್ತಿಯನ್ನು ಶ್ರೀಮತಿ ಶ್ರೀದೇವಿ ಕೆರೆಮನೆ ಹಾಗೂ ಡಾ. ಚಿದಾನಂದ ಸಾಲಿ ಅವರುಗಳಿಗೆ ಅಧ್ಯಕ್ಷರಾದ ನಾಡೋಜ ಡಾ. ಮನು ಬಳಿಗಾರ್ ಅವರು ಪ್ರದಾನ ಮಾಡಿದರು. ಗೌರವ ಕಾರ್ಯದರ್ಶಿಗಳಾಗಿದ್ದ ಶ್ರೀ ವ.ಚ. ಚನ್ನೇಗೌಡ ಅವರು ಉಪಸ್ಥಿತರಿದ್ದರು.






೨೦೧೯ನೇ ಸಾಲಿನ ವಿವಿಧ ದತ್ತಿ ಪ್ರಶಸ್ತಿ ಪ್ರದಾನವನ್ನು ಪುರಸ್ಕೃತರುಗಳಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾದ ಡಾ. ಬಿ.ವಿ. ವಸಂತಕುಮಾರ್, ವಿದ್ವಾಂಸರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್, ಅಧ್ಯಕ್ಷರಾದ ನಾಡೋಜ ಡಾ. ಮನು ಬಳಿಗಾರ್, ಶ್ರೀ ಅಜಕ್ಕಳ ಗಿರೀಶ್‌ಭಟ್, ಡಾ. ಮಲ್ಲಿಕಾ ಘಂಟಿ ಅವರು ನೆರವೇರಿಸಿದರು. ಗೌರವ ಕಾರ್ಯದರ್ಶಿ ಶ್ರೀ ಕೆ. ರಾಜಕುಮಾರ್ ಅವರೊಂದಿಗೆ ಇತರೆ ಗಣ್ಯರು ಉಪಸ್ಥಿತರಿದ್ದರು.





ಇತ್ತೀಚಿಗೆ ನಿಧನರಾದ ಪ್ರಸಿದ್ಧ ವಿಮರ್ಶಕರಾದ ಡಾ. ಜಿ.ಎಸ್. ಆಮೂರ, ಸಾಹಿತಿ ಹೇ.ಚಿ. ಶಾಂತವೀರಯ್ಯ ಹಾಗೂ ಖ್ಯಾತ ಗಾಯಕ ಡಾ. ಎಸ್.ಪಿ. ಬಾಲಸುಬ್ರಹ್ಮಣ್ಯಂ ಮತ್ತು ವಿದ್ಯಾವಾಚಸ್ಪತಿ, ಪದ್ಮಶ್ರೀ ಪುರಸ್ಕೃತರಾದ ಡಾ. ಬನ್ನಂಜೆ ಗೋವಿಂದಾಚಾರ್ಯ ಅವರುಗಳಿಗೆ ಶ್ರದ್ಧಾಂಜಲಿ ಸಭೆಯನ್ನು ಕ.ಸಾ.ಪ. ಏರ್ಪಡಿಸಿತ್ತು. ಅಗಲಿದ ಮಹನೀಯರುಗಳ ಭಾವಚಿತ್ರಕ್ಕೆ ಹಿರಿಯ ಕವಿ ಡಾ. ದೊಡ್ಡರಂಗೇಗೌಡ, ಅಧ್ಯಕ್ಷರಾದ ನಾಡೋಜ ಡಾ. ಮನು ಬಳಿಗಾರ್ ಅವರು ಪುಷ್ಪನಮನ ಮೂಲಕ ಶ್ರದ್ಧಾಂಜಲಿಯನ್ನು ಸಲ್ಲಿಸಿದರು. ಗೌರವ ಕಾರ್ಯದರ್ಶಿಗಳಾದ ಡಾ. ಪದ್ಮರಾಜ ದಂಡಾವತಿ, ಶ್ರೀ ಕೆ. ರಾಜಕುಮಾರ್, ಗೌರವ ಕೋಶಾಧ್ಯಕ್ಷರಾದ ಶ್ರೀ ಪಿ. ಮಲ್ಲಿಕಾರ್ಜುನಪ್ಪ ಅವರುಗಳು ಭಾಗವಹಿಸಿದ್ದರು.

**ಕನ್ನಡ ನುಡಿ**

**ಆಗಸ್ಟ್ ೨೦೨೦-ಜನವರಿ ೨೦೨೧**

● ಸಂಪುಟ : ೮೫,೮೬ ● ಸಂಚಿಕೆ : ೮-೧೨, ೧

ಅಧ್ಯಕ್ಷರು
**ನಾಡೋಜ ಡಾ. ಮನು ಬಳಿಗಾರ್**

ಗೌರವ ಕಾರ್ಯದರ್ಶಿಗಳು
**ಡಾ. ಪದ್ಮರಾಜ ದಂಡಾವತಿ**
**ಕೆ. ರಾಜಕುಮಾರ್**

ಗೌರವ ಕೋಶಾಧ್ಯಕ್ಷರು
**ಪಿ. ಮಲ್ಲಿಕಾರ್ಜುನಪ್ಪ**

ಸಂಪಾದಕರು
**ಬಿ.ಎನ್. ರಮೇಶ್**

ಮುಖಪುಟ ವಿನ್ಯಾಸ
**ಅವಿನಾಶ್ ಕೆ.ಎನ್.**

## ನುಡಿ ಹೂರಣ

▶ ಅಧ್ಯಕ್ಷರ ನುಡಿ........ ೧
▶ ಸಂಪಾದಕೀಯ........ ೩
▶ ಕನ್ನಡಭಾಷೆ ಪ್ರೀತಿಯ ಕಾರಂಜಿ........ ೪
▶ ಕಂಬಾರರು – ಕವಿತೆ........ ೫
▶ ಪ್ರಾಥಮಿಕ ಹಂತದಲ್ಲಿ ಕನ್ನಡವೇ ಮಾಧ್ಯಮವಾಗಲಿ.. ೬
▶ ಮಹಿಳಾ ಸಾಹಿತ್ಯ ಸಂಪುಟಗಳು........ ೮
▶ ಸರ್ವ ಸದಸ್ಯರ ಮಹಾಸಭೆಯ ತಿಳಿವಳಿಕೆ ಪತ್ರ..೧೦
▶ ಕರುನಾಡಿಗೆ ಹೋರಾಟದ 'ಯಜ್ಞದೀಕ್ಷೆ'.....೧೧
▶ ದಲಿತ ಸಾಹಿತ್ಯ ಸಂಪುಟಗಳು........೧೫
▶ ಸಾದರ ಸ್ವೀಕಾರ........೧೬

**ಬೆಲೆ : ಒಂದು ರೂಪಾಯಿ**

ವಿಳಾಸ :

**ಕನ್ನಡ ನುಡಿ** ಕನ್ನಡ ಸಾಹಿತ್ಯ ಪರಿಷತ್ತು,
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ,
ಬೆಂಗಳೂರು – ೫೬೦ ೦೧೮
ದೂರವಾಣಿ : ೨೬೬೧೨೯೯೧-೨೬೬೨೩೫೮೪
ದೂರಪತ್ರಕ : ೨೨೪೨೩೮೬೭
ವೆಬ್‌ಸೈಟು : http://www.kasapa.in
ಇಮೇಲ್ : kannadaparishattu@gmail.com

## ಅಧ್ಯಕ್ಷರ ನುಡಿ



# ಕಷ್ಟ ಕಾಲದಲ್ಲಿಯೂ ಸಾಧನೆಯ ದಾಪುಗಾಲು

**ಕ**ಳೆದ ವರ್ಷದ ಫೆಬ್ರವರಿಯಲ್ಲಿ ಕಲಬುರ್ಗಿಯಲ್ಲಿ ಡಾ.ಎಚ್.ಎಸ್.ವೆಂಕಟೇಶ ಮೂರ್ತಿ ಅವರ ಅಧ್ಯಕ್ಷತೆಯಲ್ಲಿ ನಡೆದ ಅದ್ದೂರಿ ೮೫ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಮುಗಿಸಿಕೊಂಡು ನಮ್ಮ ನಮ್ಮ ಊರುಗಳಲ್ಲಿ ನಾವು ಬಂದು ಸೇರಿಕೊಂಡ ಕೆಲವೇ ದಿನಗಳಲ್ಲಿ ಇಡೀ ಜಗತ್ತನ್ನು ಕೊರೊನಾ ಎಂಬ ಮಾರಕ ಸಾಂಕ್ರಾಮಿಕ ರೋಗ ಆವರಿಸಿಕೊಂಡಿತು. ಪ್ರಪಂಚದಾದ್ಯಂತದ ಜನಜೀವನ ತಲ್ಲಣಗೊಂಡಿತು : ಬದುಕು ಅಸ್ತವ್ಯಸ್ತವಾಯಿತು. ಸಾವಿರಾರು ಜನರು ಪ್ರಾಣ ಕಳೆದುಕೊಂಡರು. ಎಲ್ಲ ಕ್ಷೇತ್ರಗಳಲ್ಲಿ ಆದ ಹಾಗೆಯೇ ಸಾಹಿತ್ಯ ಲೋಕದ ಚಟುವಟಿಕೆಗಳೂ ನಿಂತುಕೊಂಡುವು. ಸಭೆ ಸಮಾರಂಭಗಳನ್ನು ಮಾಡುವುದು ದುಸ್ತರವಾಯಿತು. ಲಾಕ್‌ಡೌನ್ ಅವಧಿಯಲ್ಲಿಯಂತೂ ಎಲ್ಲವೂ ನಿಂತು ಹೋಗಿತ್ತು. ಆದರೂ ಕನ್ನಡ ಸಾಹಿತ್ಯ ಪರಿಷತ್ತು ಇಂಥ ದುರಿತ ಕಾಲದಲ್ಲಿಯೇ ಯಾವ ಯಾವ ಕೆಲಸಗಳನ್ನು ಮಾಡಬಹುದು ಎಂದು ಯೋಚಿಸಿ, ಕೋವಿಡ್-೧೯ ನಿಯಮಗಳನ್ನು ಕಟ್ಟು ನಿಟ್ಟಾಗಿ ಪಾಲಿಸುತ್ತ, ಮುಖ್ಯವಾಗಿ ದತ್ತಿ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬಂದಿದೆ. ನಾಡಿನ ಅತ್ಯುಚ್ಚ ಸಾಹಿತ್ಯ ಪ್ರಶಸ್ತಿಯಾದ ನೃಪತುಂಗ ಪ್ರಶಸ್ತಿಗೆ ಕನ್ನಡದ ಅತ್ಯಂತ ಹಿರಿಯ ವಿಮರ್ಶಕರಲ್ಲಿ ಒಬ್ಬರಾದ ಡಾ.ಜಿ.ಎಸ್.ಆಮೂರ್ ಅವರನ್ನು ಆಯ್ಕೆ ಮಾಡಿದೆವು. ಆದರೆ, ಆ ವೇಳೆಗಾಗಲೇ ಅನಾರೋಗ್ಯದಿಂದ ಹಾಸಿಗೆ ಹಿಡಿದಿದ್ದ ಅವರು ಪ್ರಶಸ್ತಿ ಪ್ರದಾನ ಸಮಾರಂಭ ನಡೆಯುವ ವೇಳೆಗೆ ನಮ್ಮನ್ನು ಅಗಲಿದರು.

ಕೊರೊನಾ ಕಾಲದಲ್ಲಿಯೇ ಕನ್ನಡ ನುಡಿಯ ೨೦೨೦ರ ಫೆಬ್ರವರಿ-ಜುಲೈ ಸಂಚಿಕೆಯನ್ನು ನಿಮ್ಮ ಕೈಗೆ ಇಟ್ಟಿದ್ದೆವು. ಆ ಸಂಚಿಕೆಯಲ್ಲಿ ಪರಿಷತ್ತಿನ ಆಶ್ರಯದಲ್ಲಿ ಹಮ್ಮಿಕೊಂಡಿರುವ ಮಹತ್ವಾಕಾಂಕ್ಷೆಯ ಯೋಜನೆಯಾದ ಮಹಿಳಾ ಸಂಪುಟಗಳ ಸಿದ್ಧತೆ ಕುರಿತು ಪ್ರಸ್ತಾಪಿಸಿದ್ದೆವು. ನಾನು ಪ್ರಧಾನ ಸಂಪಾದಕನಾಗಿರುವ ಮತ್ತು ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ.ಮಲ್ಲಿಕಾ ಘಂಟಿ ಅವರು ಮಾಲಿಕೆ ಸಂಪಾದಕರಾಗಿರುವ ಈ ಯೋಜನೆಯಡಿ ಈಗಾಗಲೇ ಕಥೆ-ಡಾ.ಪದ್ಮಿನಿ ನಾಗರಾಜು, ಕಾವ್ಯ-ಡಾ.ಪಿ.ಚಂದ್ರಿಕಾ, ವಿಮರ್ಶೆ-ಡಾ.ಎಂ.ಎಸ್.ಆಶಾದೇವಿ, ಸ್ತ್ರೀವಾದಿ ಚಿಂತನೆ – ಡಾ.ಮಲ್ಲಿಕಾ ಘಂಟಿ, ಲಲಿತ ಪ್ರಬಂಧ-ಡಾ.ತಮಿಳ್ ಸೆಲ್ವಿ ಮತ್ತು ಬಾ.ಹ.ರಮಾಕುಮಾರಿ, ಸಂಕೀರ್ಣ – ಡಾ.ಎನ್.ಲಕ್ಷ್ಮೀ, ಜಾನಪದ-ಡಾ.ಗುರುದೇವಿ ಹುಲೆಪ್ಪನವರಮಠ ಮತ್ತು ಅಂಕಣ-ಪ್ರತಿಭಾ ನಂದಕುಮಾರ್, ಸಂಪುಟಗಳು ಅಚ್ಚಾಗಿದ್ದು ಇನ್ನೇನು ಬಿಡುಗಡೆಯಾಗಲಿವೆ. ಈ ಯೋಜನೆ ರೂಪುಗೊಂಡ ಕೆಲವೇ ತಿಂಗಳುಗಳಲ್ಲಿ ಪ್ರತಿ ಸಂಪುಟದ ಸಂಪಾದಕರು ಅತ್ಯಂತ ಶೀಘ್ರವಾಗಿ ಹಾಗೂ ಕಾಲಮಿತಿಯಲ್ಲಿ ತಮ್ಮ ಕೆಲಸ ಪೂರೈಸಿದರು. ಪರಿಷತ್ತಿನ ಪರವಾಗಿ ಅವರಿಗೆಲ್ಲ ಕೃತಜ್ಞತೆಗಳು ಮತ್ತು ಅಭಿನಂದನೆಗಳು. ಈ ಸಂಪುಟಗಳ ಯೋಜನೆಗಿಂತ ಮುಂಚೆಯೇ ಚಿಕ್ಕಮಗಳೂರಿನಲ್ಲಿ ರಾಜ್ಯ ಮಟ್ಟದ ಎರಡು ದಿನಗಳ ಮಹಿಳಾ ಸಮ್ಮೇಳನವನ್ನು ಡಾ.ಸುಧಾ ಮೂರ್ತಿ ಅವರ ಅಧ್ಯಕ್ಷತೆಯಲ್ಲಿ ಅತ್ಯಂತ ಯಶಸ್ವಿಯಾಗಿ ನಡೆಸಿದ್ದೆವು ಎಂಬುದನ್ನು ಇಲ್ಲಿ ಉಲ್ಲೇಖಿಸಲು ಬಯಸುವೆ.

ನನ್ನ ಅವಧಿಯಲ್ಲಿ ಕೋಲಾರದಲ್ಲಿ ರಾಜ್ಯಮಟ್ಟದ ದಲಿತ ಸಾಹಿತ್ಯ ಸಮ್ಮೇಳನವನ್ನು ಏರ್ಪಡಿಸಿ ಅಲ್ಲಿ ಆರು ದಲಿತ ಸಂಪುಟಗಳನ್ನು ಬಿಡುಗಡೆ ಮಾಡಿದ್ದೆವು. ಆ ಪೈಕಿ ಉಳಿದಿದ್ದ ಆತ್ಮಕಥೆ ಮತ್ತು ವಿಮರ್ಶೆಯ ಸಂಪುಟಗಳು ಸಿದ್ಧವಾಗಿವೆ. ಹೀಗೆ ಕೈಗೆ ಎತ್ತಿಕೊಂಡ ಎಲ್ಲ ಕೆಲಸ ಮಾಡಿದ ತೃಪ್ತಿ ನನಗೆ ಇದೆ. ದಲಿತ ಸಂಪುಟಗಳೇ ಆಗಲಿ ಮಹಿಳಾ ಸಂಪುಟಗಳೇ ಆಗಲಿ ಇವನ್ನು ರಾಜ್ಯದ ಯಾವುದಾದರೂ ವಿಶ್ವವಿದ್ಯಾಲಯ ಮಾಡಬೇಕಾಗಿದ್ದ ಕೆಲಸ ಎಂದು ಈ ಸಂಪುಟಗಳ ರಚನೆಯಲ್ಲಿ ತೊಡಗಿಕೊಂಡಿರುವ

ವಿದ್ವಾಂಸರೇ ಅಭಿಪ್ರಾಯ ಪಟ್ಟಿದ್ದಾರೆ. ಅದು ನಮ್ಮ ಕೆಲಸಕ್ಕೆ ಸಿಕ್ಕ ವಿಶೇಷ ಮನ್ನಣೆ ಎಂದು ನಾನು ಭಾವಿಸಿದ್ದೇನೆ. ಹಾಗೂ ಕನ್ನಡ ಸಾಹಿತ್ಯ ಪರಿಷತ್ತು ವಿಶ್ವವಿದ್ಯಾಲಯ ಮಾಡಬೇಕಾದ, ಮಾಡಬಹುದಾದ ಕೆಲಸವನ್ನು ಮಾಡಬಲ್ಲುದು ಎಂಬುದನ್ನು ನನ್ನ ಅವಧಿಯಲ್ಲಿ ತೋರಿಸಿಕೊಟ್ಟಂತೆಯೂ ಆಗಿದೆ ಎಂದೂ ಅಂದುಕೊಂಡಿದ್ದೇನೆ. ಇಲ್ಲಿ ಇನ್ನೊಂದು ಮಾತನ್ನೂ ಹೇಳಬೇಕು : ಪರಿಷತ್ತು ಬರೀ ಸಮಾರಂಭಗಳನ್ನು ಮಾತ್ರ ಮಾಡಿಲ್ಲ ಅಗತ್ಯವಾಗಿ ನಡೆಯಬೇಕಾದ ಸಮಾರಂಭಗಳ ಜೊತೆಗೆ ಇಂಥ ಬಹುಕಾಲ ಉಳಿಯುವ ಪ್ರಕಟಣೆಯಲ್ಲಿಯೂ ತೊಡಗಿಕೊಂಡಿದೆ ಎಂಬುದನ್ನು ಸಾಹಿತ್ಯ ಚರಿತ್ರೆಕಾರರು ಗಮನಿಸುತ್ತಾರೆ ಎಂದು ಭಾವಿಸಿದ್ದೇನೆ.

ದಲಿತ ಮತ್ತು ಮಹಿಳಾ ಸಂಪುಟಗಳನ್ನು ಸಿದ್ಧಗೊಳಿಸಿರುವುದು ಮತ್ತು ಮಹಿಳಾ ಹಾಗೂ ದಲಿತ ಸಾಹಿತ್ಯ ಸಮ್ಮೇಳನಗಳನ್ನು ಏರ್ಪಡಿಸಿರುವುದು ನಾನು ನಂಬಿದ ಹಾಗೂ ಆಚರಣೆಗೆ ತಂದ ಪ್ರತಿಭಾ ನ್ಯಾಯ, ಸಾಮಾಜಿಕ ನ್ಯಾಯ ಮತ್ತು ಪ್ರಾದೇಶಿಕ ನ್ಯಾಯದ ತತ್ವಗಳಿಗೆ ಪೂರಕವಾಗಿದೆ. ಮತ್ತು ಆ ತತ್ವಗಳಿಗೆ ಅನುಗುಣವಾಗಿ ನಡೆದುಕೊಂಡು ಸಾರ್ಥಕತೆಯೂ ನನ್ನ ಮನಸ್ಸಿನಲ್ಲಿ ಮೂಡಿದೆ. ಇಂಥ ಅನೇಕ ಕೆಲಸಗಳು ಕಳೆದ ಐದು ವರ್ಷಗಳಲ್ಲಿ ನಡೆದಿವೆ. ಪ್ರಾತಿನಿಧಿಕವಾಗಿ ಈ ಎರಡನ್ನು ಇಲ್ಲಿ ಉಲ್ಲೇಖಿಸಿರುವೆ.

ನಮ್ಮ ಅವಧಿಯ ಐದು ವರ್ಷಗಳು ಇನ್ನೇನು ಮುಗಿಯುತ್ತ ಬಂದಿವೆ. ಹಿಂತಿರುಗಿ ನೋಡಿದಾಗ ಈ ಅವಧಿಯಲ್ಲಿ ಇಷ್ಟೆಲ್ಲ ಪ್ರಥಮಗಳನ್ನು ಸಾಧಿಸಲು ಸಾಧ್ಯವಾಯಿತೇ ಎಂದು ಅಚ್ಚರಿ ಆಗುತ್ತದೆ. ನಾವು ಮಾಡಿದ ಕೆಲಸದ ಪಟ್ಟಿಯನ್ನು ಕೊಡುತ್ತ ಕೂಡಲು ಇಲ್ಲಿ ಜಾಗ ಸಾಲುವುದಿಲ್ಲ. ಅದಕ್ಕಾಗಿಯೇ 'ಕಾಯಕ ನಿರತ', 'ಕಾಯಕ ಪಥ' ಎಂಬ ಕಿರು ಹೊತ್ತಿಗೆಗಳನ್ನು ಮುದ್ರಿಸಿ ಎಲ್ಲರಿಗೂ ತಲುಪಿಸುವ ಕೆಲಸ ಮಾಡಿದ್ದೇವೆ. ಮಾಡಿದ ಕೆಲಸ ದಾಖಲೆಯಾಗಿಯೂ ಉಳಿಯಬೇಕು ಎಂಬುದು ಈ ಹೊತ್ತಿಗೆಗಳ ಪ್ರಕಟಣೆಯ ಹಿಂದಿನ ಉದ್ದೇಶ.

ಒಂದು ಕಡೆ ಹೀಗೆ ಸಮ್ಮೇಳನ ಮತ್ತು ಪುಸ್ತಕ ಪ್ರಕಟಣೆಯ ತನ್ನ ಅಗತ್ಯ ಕೆಲಸಗಳನ್ನು ಮಾಡುವುದರ ಜೊತೆಗೆ ಪರಿಷತ್ತು ಕನ್ನಡ ನಾಡಿನ, ಭಾಷೆಯ ವಿರುದ್ಧದ ಉಪಟಳಗಳ ವಿರುದ್ಧವೂ ಧ್ವನಿ ಎತ್ತಿದೆ.

ಪಕ್ಕದ ಮಹಾರಾಷ್ಟ್ರ ರಾಜ್ಯದಲ್ಲಿ ಈಗ ಶಿವಸೇನೆ ನೇತೃತ್ವದ ಸರ್ಕಾರ ಆಡಳಿತದಲ್ಲಿ ಇದೆ. ಭಾಷೆಯ ಅಸ್ಮಿತೆಯನ್ನು ಮುಂದೆ ಮಾಡಿಕೊಂಡು, ಚಳವಳಿ ಮಾಡಿಕೊಂಡೇ ಇರುವ ಶಿವಸೇನೆಯು ಈಗ ನಮ್ಮ ರಾಜ್ಯದ ಜೊತೆಗೆ ಕಾಲು ಕೆದರಿ ಜಗಳಕ್ಕೆ ನಿಂತಿದೆ. ಮೂರು ಭಿನ್ನ ಭಿನ್ನ ನಿಲುವಿನ ಪಕ್ಷಗಳು ಕೂಡಿಕೊಂಡು ಅಲ್ಲಿ ಸರ್ಕಾರ ರಚನೆ ಆಗಿದೆ. ಹೀಗಾಗಿ ತಮ್ಮ ಆಡಳಿತದ ಲೋಪ ದೋಷಗಳನ್ನು ಮುಚ್ಚಿ ಹಾಕುವ ಉದ್ದೇಶದಿಂದಲೋ ಏನೋ ಆ ರಾಜ್ಯದ ಮುಖ್ಯಮಂತ್ರಿಗಳು ತಾವು ಸಂವಿಧಾನಬದ್ಧವಾಗಿ ಆಯ್ಕೆಯಾದ ಒಬ್ಬ ಮುಖ್ಯಮಂತ್ರಿ ಎಂಬುದನ್ನೂ ಮರೆತು ಮತ್ತೆ ಮತ್ತೆ ಗಡಿ ವಿವಾದವನ್ನು ಕೆದಕುತ್ತಿದ್ದಾರೆ.

ಮೊದಲು ಕರ್ನಾಟಕವು ಆಕ್ರಮಿಸಿಕೊಂಡಿರುವ ಮರಾಠಿ ಪ್ರದೇಶಗಳನ್ನು ಮುಕ್ತಗೊಳಿಸಿಕೊಳ್ಳುವುದಾಗಿ ಹೇಳಿದ ಅವರು ಇದೀಗ ನ್ಯಾಯಾಂಗ ನಿಂದನೆಯ ಆರೋಪವನ್ನು ನಮ್ಮ ರಾಜ್ಯದ ವಿರುದ್ಧ ಮಾಡಿದ್ದಾರೆ. ಬೆಳಗಾವಿ ಮತ್ತಿತರ ಪ್ರದೇಶಗಳನ್ನು ಕೇಂದ್ರಾಡಳಿತ ಪ್ರದೇಶಗಳಾಗಿ ಘೋಷಿಸಬೇಕು ಎಂದು ಆಗ್ರಹಿಸಿದ್ದಾರೆ. ಇವೆಲ್ಲ ಅವರ ತಂದೆ ಬಾಳಾಸಾಹೇಬ ಠಾಕ್ರೆ ಅವರ ಕಾಲದಲ್ಲಿ ಇದ್ದ ಘೋಷಣೆಗಳು. ಆ ಕಾಲದಿಂದಲೂ ಕೇಂದ್ರದಲ್ಲಿ ಇದ್ದ ಯಾವ ಸರ್ಕಾರವೂ ಮಹಾರಾಷ್ಟ್ರದ ಇಂಥ ದುರುದ್ದೇಶದ ಹೇಳಿಕೆಗಳಿಗೆ ಸೊಪ್ಪು ಹಾಕಿಲ್ಲ. ಕರ್ನಾಟಕ ಸರ್ಕಾರವಂತೂ ಕಾಲ ಕಾಲಕ್ಕೆ ತಕ್ಕ ಉತ್ತರವನ್ನು ಕೊಡುತ್ತಲೇ ಬಂದಿದೆ.


ಗಡಿ ವಿವಾದ ಎಂಬುದು ಒಂದು ಮುಗಿದು ಹೋದ ಅಧ್ಯಾಯ. ಮಹಾರಾಷ್ಟ್ರ ಸರ್ಕಾರವು ೨೦೦೬ ರಲ್ಲಿ ಸುಪ್ರೀಂ ಕೋರ್ಟಿನಲ್ಲಿ 'ಬೆಳಗಾವಿ ಮತ್ತು ಕರ್ನಾಟಕದ ಮರಾಠಿ ಭಾಷಿಕ ಪ್ರದೇಶಗಳನ್ನು' ತನಗೆ ಬಿಡಿಸಿಕೊಡಬೇಕು ಎಂದು ಅರ್ಜಿ ಸಲ್ಲಿಸಿದೆ. ಈ ಅರ್ಜಿ ಇನ್ನೂ ವಿಚಾರಣೆಗೂ ಅಂಗೀಕಾರವಾಗಿಲ್ಲ. ಹಾಗಿರುವಾಗ ಕರ್ನಾಟಕ ನ್ಯಾಯಾಂಗ ನಿಂದನೆ ಮಾಡಿದೆ, ಬೆಳಗಾವಿಯಲ್ಲಿ ಸುವರ್ಣ ವಿಧಾನಸೌಧವನ್ನು ನಿರ್ಮಿಸಿದೆ ಎಂದೆಲ್ಲ ಉದ್ಧವ ಠಾಕ್ರೆ ಅವರು ಹೇಳುವುದು ವ್ಯರ್ಥ ಬಡಬಡಿಕೆಯ ಹಾಗೆ ಕಾಣುತ್ತದೆ. ನಾವೇನು ಸುವರ್ಣ ಸೌಧವನ್ನು ಒಂದು ದಿನದಲ್ಲಿ ನಿರ್ಮಿಸಿಲ್ಲ. ಬೆಳಗಾವಿ ಮತ್ತು ಕರ್ನಾಟಕದ ಭಾಗವಾಗಿರುವ ಎಲ್ಲ ಪ್ರದೇಶಗಳನ್ನು ಅಭಿವೃದ್ಧಿ ಪಡಿಸುವುದು ನಮ್ಮ ಸರ್ಕಾರದ ಆದ್ಯ ಕರ್ತವ್ಯ. ಅದನ್ನು ಸರ್ಕಾರ ಮಾಡಿದೆ. ಆ ಮೂಲಕವೇ ಮಹಾರಾಷ್ಟ್ರ ರಾಜ್ಯಕ್ಕೆ ನಮ್ಮ ಸರ್ಕಾರ ಯಾವಾಗಲೂ ತಕ್ಕ ಉತ್ತರವನ್ನು ಕೊಟ್ಟಿದೆ. ಕನ್ನಡ ಸಾಹಿತ್ಯ ಪರಿಷತ್ತು ಗಡಿ ವಿಚಾರದಲ್ಲಿ ಯಾವಾಗಲೂ ನಮ್ಮ ರಾಜ್ಯ ಸರ್ಕಾರದ ಬೆನ್ನಿಗೆ ನಿಂತಿದೆ, ಮುಂದೆಯೂ ನಿಲ್ಲುತ್ತದೆ. ಕನ್ನಡ ನಾಡು, ನುಡಿ, ಗಡಿ ಮತ್ತು ಜಲ ಇತ್ಯಾದಿ ವಿಚಾರಗಳಲ್ಲಿ ಪರಿಷತ್ತಿನದು ಅಚಲ ನಿಲುವು. ನಾವು ಬೀದಿಗಿಳಿಯಲೂ ಸಿದ್ಧ. ಅದೇ ರೀತಿ ಶಾಂತಿ ಮತ್ತು ಸೌಹಾರ್ದದಲ್ಲಿಯೂ ನಮ್ಮದು ಅಚಲ ನಿಲುವು. ಬೆಳಗಾವಿಯಲ್ಲಿಯೇ ಆಗಲಿ ಅಥವಾ ರಾಜ್ಯದ ಯಾವುದೇ ಗಡಿ ಪ್ರದೇಶದಲ್ಲಿಯೇ ಆಗಲಿ ಎಲ್ಲ ಭಾಷಿಕರು ಅತ್ಯಂತ ಸೌಹಾರ್ದದಿಂದ ಬಾಳುತ್ತಿದ್ದಾರೆ. ಈ ಸೌಹಾರ್ದ ಯಾವಾಗಲೂ ಮುಂದುವರಿಯುತ್ತದೆ. ಮಹಾರಾಷ್ಟ್ರದ ಕಿಡಿಗೇಡಿ ರಾಜಕಾರಣಿಗಳ ಮಾತಿಗೆ ಕರ್ನಾಟಕದಲ್ಲಿ ವಾಸಿಸುವ ಮರಾಠಿ ಭಾಷಿಕರೂ ತಲೆ ಕೆಡಿಸಿಕೊಂಡಿಲ್ಲ ಎಂಬುದನ್ನು ಉದ್ಧವ ಠಾಕ್ರೆ ಅವರಂಥವರು ತಿಳಿದುಕೊಳ್ಳಬೇಕು. ಬಹುಶಃ ಅದೇ ಅವರ ಈಗಿನ ಹತಾಶ ಸ್ಥಿತಿಗೆ ಕಾರಣವೂ ಆಗಿರುವಂತಿದೆ.

ನಮ್ಮ ಅವಧಿಯ ಕೊನೆಯ ಮತ್ತು ೮೬ ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವು ಹಾವೇರಿಯಲ್ಲಿ ನಡೆಯಲು ಸಿದ್ಧತೆಗಳು ನಡೆಯುತ್ತಿವೆ. ಕನ್ನಡದ ಪ್ರಸಿದ್ಧ ಕವಿಗಳಾದ ಡಾ.ದೊಡ್ಡ ರಂಗೇಗೌಡರು ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಹಾವೇರಿಯ ಜಿಲ್ಲಾ ಉಸ್ತುವಾರಿ ಸಚಿವರೂ ಸನ್ಮಾನ್ಯ ಗೃಹಸಚಿವರಾದ ಬಸವರಾಜ ಬೊಮ್ಮಾಯಿ ಅವರು ಮತ್ತು ಜಿಲ್ಲೆಯ ಇತರ ಸಚಿವರಾದ ಬಿ.ಸಿ.ಪಾಟೀಲ ಅವರು, ಆರ್.ಶಂಕರ್ ಅವರು ಹಾಗೂ ಜಿಲ್ಲೆಯ ಶಾಸಕರು, ಜಿಲ್ಲಾ ಆಡಳಿತದ ನೇತೃತ್ವದಲ್ಲಿ ಸಿದ್ಧತೆಗಳು ನಡೆದಿವೆ. ಸಮ್ಮೇಳನದಲ್ಲಿ ಕನ್ನಡದ ಜನರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಲು ಅನುವಾಗುವಂತೆ ಕೋವಿಡ್–೧೯ರ ನಿಯಮಗಳನ್ನು ಸಡಿಲಿಸಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಆದೇಶ ಹೊರಡಿಸುತ್ತವೆ ಮತ್ತು ಸಮ್ಮೇಳನದಲ್ಲಿ ನಾವು ನೀವು ಭೇಟಿ ಮಾಡಲು ಅವಕಾಶ ಮಾಡಿಕೊಡುತ್ತವೆ ಎಂದು ಆಶಿಸುತ್ತೇನೆ.

**(ನಾಡೋಜ ಡಾ. ಮನು ಬಳಿಗಾರ್)**
ಅಧ್ಯಕ್ಷರು

## ಸಂಪಾದಕೀಯ

# ಗಡಿ ವಿಚಾರ, ನಮ್ಮಲ್ಲೇ ಇದೆ ಪರಿಹಾರ



ಬಿ.ಎನ್. ರಮೇಶ್

ರಾಜಕೀಯ ಅಸ್ತಿತ್ವ ಮತ್ತು ಸ್ವಯಂ ಬೆಳವಣಿಗೆಯ ಹಿತಾಸಕ್ತಿಗೆ ಗಂಟು ಬಿದ್ದ ವ್ಯಕ್ತಿ ಸಮಾಜದ ಸಮಗ್ರತೆಯನ್ನು, ಜನ ಸಾಮಾನ್ಯರ ಭಾವನೆಗಳನ್ನು ತನ್ನ ಸ್ವಹಿತದ ಬೇರಿಗೆ ನೀರು, ಗೊಬ್ಬರವನ್ನಾಗಿ ಮಾಡಿಕೊಳ್ಳುತ್ತಾನೆ ಎನ್ನುವುದಕ್ಕೆ ಮತ್ತೆ ತಲೆ ಎತ್ತಿರುವ ಬೆಳಗಾವಿ ಗಡಿ ವಿವಾದವು ಕಾರಣವಾಗಿದೆ. ಮಹಾರಾಷ್ಟ್ರದಲ್ಲಿ ಸದ್ಯ ರಾಜಕೀಯ ವಿಷಮತೆ ಶುರುವಾಗಿದೆ. ಮಹಾರಾಷ್ಟ್ರ ವಿಕಾಸ್ ಅಗಾಡಿ ಅಂತಾ ಹೆಸರಿಟ್ಟುಕೊಂಡಿರೊ ಆಡಳಿತ ಕೂಟವು ತನ್ನ ಪ್ರಾದೇಶಿಕ ವಿಸ್ತರಣೆಯ ಅಜೆಂಡಾವನ್ನು ಪ್ರದರ್ಶನ ಮಾಡಲು ಹೊರಟಿದೆ. ಅದರ ಭಾಗವಾಗಿ ಅಲ್ಲಿನ ಮುಖ್ಯಮಂತ್ರಿಗಳು ಪದೇ ಪದೇ ಬೆಳಗಾವಿ, ನಿಪ್ಪಾಣಿ, ಕಾರವಾರದ ಬಗ್ಗೆ ಮಾತನಾಡುತ್ತಿದ್ದಾರೆ. ಅಧಿಕಾರಕ್ಕೆ ಬಂದ ಕೂಡಲೇ ಗಡಿ ವಿಚಾರವನ್ನು ನೋಡಿಕೊಳ್ಳಲೆಂದೇ ಇಬ್ಬರು ಸಚಿವರನ್ನು ನೇಮಕ ಮಾಡಿದ್ದರು. ಮೊನ್ನೆ–ಮೊನ್ನೆ ನಡೆದ ಪುಸ್ತಕ ಬಿಡುಗಡೆಯೊಂದರಲ್ಲೂ ಬೆಳಗಾವಿ, ನಿಪ್ಪಾಣಿ, ಕಾರವಾರಗಳು ಕರ್ನಾಟಕ ಸ್ವಾಧೀನ ಮಾಡಿಕೊಂಡಿರುವ ಭಾಗಗಳು ಎಂದೇ ಹೇಳಿಕೊಂಡಿದ್ದಾರೆ. ಅದಕ್ಕಾಗಿ ಮಹಾರಾಷ್ಟ್ರ ಏಕೀಕರಣ ಸಮಿತಿಯನ್ನು ಮರಾಠರ ತಾಕತ್ತಿನ ಸ್ವರೂಪ ಅಂತಲೂ ಹೇಳಿಕೊಂಡಿದ್ದಾರೆ.

ಮಹಾರಾಷ್ಟ್ರ ಸರ್ಕಾರದ ಇಂತಹ ಭಂಡತನಗಳು ಕೊನೆಯಾಗಬೇಕಾದರೆ ಕರ್ನಾಟಕ ಸರ್ಕಾರವೂ ಗಡಿ ವಿಚಾರದಲ್ಲಿ ತನ್ನ ಗಟ್ಟಿತನವನ್ನು ಇನ್ನಷ್ಟು ಪ್ರದರ್ಶನ ಮಾಡಬೇಕು. ಪ್ರತ್ಯೇಕ ಸಚಿವರನ್ನೂ ನೇಮಿಸಿ ಗಡಿ ಸಂಬಂಧಿತ ವಿಚಾರಗಳಲ್ಲಿ ನಮ್ಮ ಹಿತವನ್ನು ಕಾಯ್ದುಕೊಳ್ಳುವ ಪ್ರಯತ್ನಗಳನ್ನು ಇನ್ನಷ್ಟು ಚುರುಕುಗೊಳಿಸಬೇಕು. ಇದಿಷ್ಟೇ ಅಲ್ಲದೇ ಬೆಳಗಾವಿಯೂ ಸೇರಿದಂತೆ ಮರಾಠಿ, ತೆಲುಗು, ತಮಿಳು ಪ್ರಭಾವ ಇರುವ ಗಡಿ ಪ್ರದೇಶಗಳಲ್ಲಿ ಮೂಲಸೌಕರ್ಯವನ್ನು ಹೆಚ್ಚಳ ಮಾಡುವ ಮೂಲಕ ಸ್ಥಳೀಯರಲ್ಲಿ ನಮ್ಮ ನೆಲದ ಬಗೆಗಿನ ಪ್ರೀತಿಯನ್ನು, ಅಭಿಮಾನವನ್ನು ಹೆಚ್ಚಿಸಬೇಕು. ಹೆಚ್ಚು–ಹೆಚ್ಚು ಕನ್ನಡದ ಕಾರ್ಯಕ್ರಮಗಳನ್ನು ಗಡಿ ಭಾಗದಲ್ಲಿ ಆಯೋಜಿಸಿ ಕನ್ನಡದ ಅಸ್ಮಿತೆಯನ್ನು, ಅಸ್ತಿತ್ವವನ್ನು ಜಾಗೃತಗೊಳಿಸುವ ನಿರಂತರ ಕಾರ್ಯವನ್ನು ನಡೆಸಬೇಕು.

ಜನ ಭಾವನೆ, ಜನಾಭಿಪ್ರಾಯಗಳನ್ನು ಕನ್ನಡ, ಕರ್ನಾಟಕದ ಕಡೆಗೆ ಬಲವಾಗಿ ನಿಲ್ಲಿಸದೇ ಹೋದರೆ ಅಖಂಡ ಕರ್ನಾಟಕವನ್ನು ಕಾಪಿಟ್ಟುಕೊಳ್ಳುವುದು ಕಷ್ಟ ಆಗಬಹುದು ಎನ್ನುವ ಆತಂಕ ದೂರ ಮಾಡುವಲ್ಲಿ ಸರ್ಕಾರಗಳು ಪ್ರಮುಖ ಪಾತ್ರವನ್ನು ನಿರ್ವಹಣೆ ಮಾಡಬೇಕಿದೆ.

ಬೆಳಗಾವಿ ಆದಿಯಾಗಿ ಗಡಿಯ ವಿವಾದ ಎದುರಿಸುತ್ತಿರುವ ಪ್ರದೇಶಗಳು ಕರ್ನಾಟಕಕ್ಕೆ ಸೇರಿವೆ ಎನ್ನುವುದನ್ನು ಸರ್ಕಾರವೇ ನೇಮಿಸಿದ ಸಾಕಷ್ಟು ಸಮಿತಿಗಳು ಸಾಬೀತು ಮಾಡಿವೆ. ಅಲ್ಲಿನ ಜನರ ಆಡು ಭಾಷೆ, ಜೀವನ ಶೈಲಿ ಮತ್ತು ಇನ್ನಿತರೆ ಸಾಂಸ್ಕೃತಿಕ ವೈಶಿಷ್ಟ್ಯತೆಗಳು ಕನ್ನಡತನವನ್ನು ಸಾಕ್ಷೀಕರಿಸುತ್ತಿವೆ.

ಸ್ವಾತಂತ್ರ್ಯಪೂರ್ವದಲ್ಲಿ ಕರ್ನಾಟಕದ ಭಾಗಗಳು ಹರಿದು ಹಂಚಿಹೋಗಿದ್ದವು. ಸ್ವಾತಂತ್ರ ಬಂದು ೯ ವರ್ಷಗಳ ನಂತರ ೧೯೫೬ರಲ್ಲಿ ಚದುರಿ ಹೋಗಿದ್ದ ಭಾಗಗಳೆಲ್ಲವನ್ನೂ ಏಕೀಕರಣಗೊಳಿಸಿ ಮೈಸೂರು ರಾಜ್ಯವನ್ನಾಗಿ ಮಾಡಲಾಯಿತು. (೧೯೭೩ರ ನವೆಂಬರ್ ೧ ರಂದು ಕರ್ನಾಟಕ ಎಂದು ಪುನರ್ ನಾಮಕರಣ ಮಾಡಲಾಗಿದೆ) ನೆರೆಹೊರೆಯ ರಾಜ್ಯಗಳ ಆಳ್ವಿಕೆಯಲ್ಲಿದ್ದ ಕನ್ನಡ ಮಾತಾಡುವ ಪ್ರದೇಶಗಳನ್ನೆಲ್ಲಾ ಆಯಾ ಪ್ರದೇಶಗಳಿಂದ ಬಿಡುಗಡೆ ಮಾಡಿ ಮೈಸೂರು ರಾಜ್ಯಕ್ಕೆ ಸೇರಿಸಲಾಯಿತು. ಬಾಂಬೆ ಪ್ರಾಂತ್ಯದಲ್ಲಿದ್ದ ಕೆಲ ಪ್ರದೇಶಗಳೂ ಕರ್ನಾಟಕಕ್ಕೆ ಸೇರಿದವು. ಆದರೆ ನೆರೆರಾಜ್ಯಗಳು ಇದಕ್ಕೆ ಸಿದ್ಧವಿರಲಿಲ್ಲ. ಆ ಕಾರಣದಿಂದಲೇ ನ್ಯಾಯವಾಗಿ ಕನ್ನಡ ನೆಲವಾಗಿದ್ದ ಹೊಸೂರು, ಕೃಷ್ಣಗಿರಿ ತಮಿಳುನಾಡಿನಲ್ಲಿಯೇ ಉಳಿದವು. ಅನಂತಪುರ, ರಾಯದುರ್ಗ, ಅದೋಣಿ, ಮಂತ್ರಾಲಯಗಳು ಆಂಧ್ರದಲ್ಲಿ ಉಳಿದವು. ಕಾಸರಗೋಡು ಕೇರಳದ ಪಾಲಾಯಿತು. ಅಕ್ಕಲಕೋಟೆ, ಜತ್ತ, ಸೊಲ್ಲಾಪುರಗಳು ಮಹಾರಾಷ್ಟ್ರದಲ್ಲೇ ಉಳಿದು ಹೋದವು. ಇದಷ್ಟೇ ಅಲ್ಲದೆ ಕರ್ನಾಟಕದ ಭಾಗವಾಗಿದ್ದ ಮತ್ತಷ್ಟು ಪ್ರದೇಶಗಳ ಮೇಲೆ ನೆರೆ ರಾಜ್ಯಗಳು ಹಕ್ಕು ಮಂಡಿಸತೊಡಗಿದವು. ಬೆಳಗಾವಿ, ಬೀದರ್, ಕಾರವಾರ ಜಿಲ್ಲೆಗಳ ಕೆಲಭಾಗಗಳನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕು ಎಂದು ಮಹಾರಾಷ್ಟ್ರ ಕೂಗೆಬ್ಬಿಸಿತು. ಇಲ್ಲಿಂದ ಬೆಳಗಾವಿ ಗಡಿ ವಿವಾದ ಆರಂಭವಾಯಿತು.

ಮಹಾರಾಷ್ಟ್ರ ಸರಕಾರದ ಒತ್ತಾಯಕ್ಕೆ ಮಣಿದ ಕೇಂದ್ರ ಸರಕಾರ ೧೯೬೦ರ ಜೂನ್ ೫ ರಂದು ನಾಲ್ವರು ಸದಸ್ಯರನ್ನೊಳಗೊಂಡ ಆಯೋಗವನ್ನು ರಚಿಸಿತು. ಇದರಲ್ಲಿ ಇಬ್ಬರು ಸದಸ್ಯರನ್ನು ಕರ್ನಾಟಕದಿಂದ ಹಾಗೂ ಇನ್ನಿಬ್ಬರು ಸದಸ್ಯರನ್ನು ಮಹಾರಾಷ್ಟ್ರದಿಂದ ಆಯ್ಕೆ ಮಾಡಲಾಗಿತ್ತು. ಸರ್ವೋಚ್ಚ ನ್ಯಾಯಾಲಯದ

.....ಪುಟ ೧೪ ಕ್ಕೆ

# ಕನ್ನಡಭಾಷೆ ಪ್ರೀತಿಯ ಕಾರಂಜಿ

ಡಾ. ಶಿವಾನಂದ ಶಿವಾಚಾರ್ಯರು
ಹಿರೇಮಠ, ತುಮಕೂರು

ಅದು ಕೆ.ಸಿ. ರೆಡ್ಡಿಯವರು ಮುಖ್ಯಮಂತ್ರಿಯಾಗಿದ್ದ ಕಾಲ, ಕುವೆಂಪುರವರು ಆಗೊಂದು ಕವಿತೆಯನ್ನು ಬರೆದಿರುತ್ತಾರೆ. "ಕರ್ನಾಟಕ ಎಂಬುದೇನು ಹೆಸರು ಬರಿಯ ಮಣ್ಣಿಗೆ? ಮಂತ್ರ ಕಣಾ, ಶಕ್ತಿ ಕಣಾ, ತಾಯಿ ಕಣಾ, ಅದು ದೇವಿ ಕಣಾ, ಬೆಂಕಿ ಕಣಾ, ಸಡಿಲು ಕಣಾ, ಚಂಡಿ ಕಣಾ, ಚಾಮುಂಡಿ ಕಣಾ" ಎಂದು.

ಕುವೆಂಪುರವರು ಇಷ್ಟೊಂದು ತೀಕ್ಷ್ಣವಾಗಿ ಕವಿತೆ ಬರೆದುದನ್ನು ಗಮನಿಸಿದ ಕೆ.ಸಿ. ರೆಡ್ಡಿಯವರು ಕುವೆಂಪುರವರ ಮೇಲೆ ನೋಟಿಸ್ ಜಾರಿಮಾಡುತ್ತಾರೆ.

ಆಗ ಕುವೆಂಪುರವರು, "ಅಖಂಡ ಕರ್ನಾಟಕ ಅಲ್ತೊ ನಮ್ಮ ಕೂಗಾಟದ ರಾಜಕೀಯ ನಾಟಕ, ಹರಸುತಿಹನು ದೇವ ಗಾಂಧಿ; ಮಂತ್ರಿಸಿಹುದು ಋಷಿಯ ನಾಂದಿ" ಎಂದು ಮತ್ತೊಂದು ಕವಿತೆ ಬರೆಯುತ್ತಾರೆ. ರೆಡ್ಡಿಯವರು ಕರೆದ ಕ್ಯಾಬಿನೆಟ್ ಸಭೆಯಲ್ಲಿ ಒಂದಿಬ್ಬರು ಸಚಿವರು ಕುವೆಂಪು ಅವರಿಗೆ ಇನ್ನೊಂದು ನೋಟಿಸ್ ಕೊಡಲು ಮತ್ತು ಅವರ ಬಡ್ತಿಯನ್ನು ತಡೆಹಿಡಿಯಲು ಸೂಚಿಸುತ್ತಾರೆ.



ಆಗ ಕೆ. ಸಿ. ರೆಡ್ಡಿಯವರು ಹೇಳಿದರಂತೆ, "ಒಂದು ನೋಟಿಸ್‌ಗೇನೇ ಒಂದು ಕವಿತೆ ಬರೆದಿದ್ದಾರೆ. ಇನ್ನೊಂದು ನೋಟಿಸ್ ಕೊಟ್ಟರೆ ಅವರು ಮೂರು ಕವಿತೆ ಬರೆಯುತ್ತಾರೆ" ಎಂದು.

ಅವತ್ತಿನ ಸರಕಾರಕ್ಕೆ ಇದು ಕುವೆಂಪುರವರ ಬಗ್ಗೆ ಇದ್ದ ಭಯ, ಕುವೆಂಪುರವರ ಸಾತ್ತ್ವಿಕ ಹಾಗೂ ಸಾಹಿತ್ಯಿಕ ಬೆದರಿಕೆಗೆ ಅವತ್ತಿನ ಸರಕಾರ ಹೆದರುತ್ತಿತ್ತು.

ಆ ಸಂದರ್ಭದಲ್ಲಿ, ನಿಟ್ಟೂರು ಶ್ರೀನಿವಾಸರಾಯರು ಮಧ್ಯಪ್ರವೇಶಿಸಿ, "ಪುಟ್ಟಪ್ಪನವರಿಗೆ ಹಾಗೆಲ್ಲ ನೋಟಿಸ್ ಕೊಡೋದಕ್ಕೆ ಹೋಗಬೇಡಿ" ಎಂದು ಸರಕಾರಕ್ಕೆ ಬುದ್ಧಿಹೇಳಿ ಕುವೆಂಪುರವರಿಗೆ ನೋಟಿಸ್ ಕೊಡದಂತೆ ಮತ್ತು ನೋಟಿಸ್ ಪ್ರಕರಣವನ್ನು ಮುಂದುವರಿಯದಂತೆ ನೋಡಿಕೊಂಡರಂತೆ!!

ಕುವೆಂಪುರವರು ಬರೀ ರಾಷ್ಟ್ರಕವಿ ಮಾತ್ರ ಅಲ್ಲ; ಅವರು ಜನಮಾನಸದ ಕವಿ. ಅವರು ರಸಋಷಿ. ಕುವೆಂಪುರವರು ಕನ್ನಡದೊಂದಿಗೆ ಮತ್ತು ಕನ್ನಡದ ನೆಲ, ಜಲದೊಂದಿಗೆ ಅದ್ವೈತಗೊಂಡಿದ್ದರು.

"ಕನ್ನಡವೆಂದರೆ ಕುವೆಂಪು; ಕುವೆಂಪುವೆಂದರೆ ಕನ್ನಡ"!!. ಕುವೆಂಪುರವರದು ಕನ್ನಡನಾಡು, ನುಡಿಯೊಂದಿಗೆ ಅವಿನಾಭಾವಸಂಬಂಧ.

ಅವರಿಗೆ ಕನ್ನಡನಾಡಿನ ಬಗ್ಗೆ ಅದೆಂಥ ಒಲವಿತ್ತು. ಅದೆಷ್ಟು ಗೌರವವಿತ್ತು ಎಂಬುವುದಕ್ಕೆ ಈ ಮಾತು ಸಾಕ್ಷಿ- "ನಾನು ಇಲ್ಲಿ ಹುಟ್ಟಿದೆ, ಇಲ್ಲಿ ಇರದೆ ಬೇರೆ ಕಡೆ ಹುಟ್ಟಿದ್ದರೆ, ಬೇರೆ ಕಡೆ ಬದುಕಿದ್ದರೆ, ಇದಕ್ಕಿಂತ ಉತ್ತಮ ಸ್ಥಾನ ದೊರೆಯುತ್ತಿರಲಿಲ್ಲ. ನನಗೆ ಇಲ್ಲಿ ಏನು ದೊರೆತಿದೆಯೋ ಅದು ಇನ್ನೆಲ್ಲಿಯೂ ದೊರೆಯದು" ಎಂದು ಅವರು ಹೇಳುತ್ತಿದ್ದರು.

ಕನ್ನಡನಾಡಿನ ಕುರಿತು ಕುವೆಂಪುರವರ ಮನದಾಳದಲ್ಲಿ ಅದೆಷ್ಟು ಧನ್ಯತಾಭಾವವಿತ್ತು ಎನ್ನುವುದಕ್ಕೆ ಅವರ ಈ ಮಾತುಗಳು ನಿದರ್ಶನ.

"ನಮ್ಮ ಕನ್ನಡನಾಡಿಗೆ ದೇವರು ಸಹ್ಯಾದ್ರಿಯನ್ನು ದಯಪಾಲಿಸಿದ್ದಾನೆ. ನಮ್ಮ ನಾಡಿಗೆ ಆ ದೇವರು ತುಂಗಾ, ಕಾವೇರಿಯರನ್ನು ದಯಪಾಲಿಸಿದ್ದಾನೆ. ಆ ದೇವರು ನಮ್ಮ ನಾಡಿಗೆ ಪಶ್ಚಿಮಸಮುದ್ರದ ಸಂಗ, ಸಾನಿಧ್ಯವನ್ನು ಕೃಪೆ ಮಾಡಿದ್ದಾನೆ. ಜೊತೆಗೆ ಅವೆಲ್ಲಕ್ಕೂ ಹೆಗಲೆಣೆಯಾಗಿ ನಿಂತರೂ ನಮಗೆ ಒಡನಾಡಿಗಳಾಗಿರುವಂತೆ ಪಂಪ, ನಾರಣಪ್ಪರನ್ನೂ ಅನುಗ್ರಹಿಸಿದ್ದಾನೆ" ಎಂದು ಅವರು ಆಗಾಗ್ಗೆ ಹೇಳುತ್ತಿದ್ದರು.

ಕನ್ನಡನಾಡನ್ನು, "ಭಾರತ ಜನನಿಯ ತನುಜಾತೆ" ಎಂದು ಕರೆಯುವ ಮೂಲಕ ಅವರು ಭಾರತಕ್ಕೆ ಮಾತೃದೀಕ್ಷೆಯನ್ನು ನೀಡಿದರೆ ಕರ್ನಾಟಕಕ್ಕೆ ಅವರು ದುಹಿತೃದೀಕ್ಷೆಯನ್ನು ನೀಡಿದ್ದಾರೆ.

"ಬೇರೆ ದೇಶದವರಾಗಲಿ ಅಥವಾ ಪ್ರಾಂತದವರಾಗಲಿ ಕರ್ನಾಟಕಕ್ಕೆ ಬರಬಾರದು, ಕರ್ನಾಟಕದಲ್ಲಿ ಇರಬಾರದು" ಎಂದು ಕುವೆಂಪುರವರು ಯಾವತ್ತೂ ಹೇಳಲಿಲ್ಲ. ಆದರೆ ಹೊರಗಿನಿಂದ ಬಂದವರು "ನಮ್ಮಲ್ಲಿ ಹೇಗಿರಬೇಕು?" ಮತ್ತು "ಅವರು ಎಂತಿರಬೇಕು?" ಎಂಬ ಕುರಿತು ಅವರು ಖಡಕ್ಕಾಗಿ ಹೇಳುತ್ತಾರೆ.

"ಕನ್ನಡನಾಡಲ್ಲಿ ಕನ್ನಡಿಗರಿಗೆ ಪ್ರಥಮಸ್ಥಾನ ದೊರೆಯಲಿ ಎಂದಾಕ್ಷಣ ಬೇರೆಯವರಿಗೆ ಸ್ಥಾನವೇ ಇಲ್ಲವೆಂದೇನಲ್ಲ. ನಮ್ಮಲ್ಲಿ ಬೇರೆಯವರು ಬರಲಿ, ಅತಿಥಿಯಾಗಿ ಬರಲಿ; ಯಜಮಾನರಾಗಿ ಅಲ್ಲ" ಎಂದು ಹೇಳುತ್ತಿದ್ದರು.

ಕುವೆಂಪುರವರು, ಅವತ್ತೇ ನಮ್ಮಗಳಿಗೆಲ್ಲ, "ಇರುವಲ್ಪ ಶಕ್ತಿಯನ್ನು, ಇರುವಲ್ಪ ದ್ರವ್ಯವನು ಪರಭಾಷಾ ಮೋಹಕ್ಕೆ ಚೆಲ್ಲಬೇಡಿ" ಎಂದು ಕಿವಿಮಾತು ಕೇಳಿದ್ದಾರೆ. ಆದರೆ ಇವತ್ತು

ನಾವು ಮಾಡುತ್ತಿರುವುದೇನು?

ಕನ್ನಡ ಶಾಲೆಗಳೇ ಮುಚ್ಚಿ ಹೋಗುವಂತೆ ಮಾಡುತ್ತಿದ್ದೇವಲ್ಲವೇ? ಇದು ನ್ಯಾಯವೇ? ಇದು ಉಚಿತವೇ? ಒಂದು ಕ್ಷಣ ನಾವೆಲ್ಲ ಎದೆಯ ಮೇಲೆ ಕೈ ಇಟ್ಟುಕೊಂಡು ಯೋಚಿಸಬೇಕು.

ಇವತ್ತು ಕಾನ್ವೆಂಟ್ ಶಾಲೆಗಳ ಅಬ್ಬರ, ಆರ್ಭಟದಲ್ಲಿ ಕನ್ನಡ ಶಾಲೆಗಳು ಇಂದು–ಮುಂದಿಲ್ಲದ ಹಾಗೆ ನೆಲಕಚ್ಚಿವೆ ಮತ್ತು ಅವು ಆಘಾತಕ್ಕೆ ಒಳಗಾಗಿವೆ. ಕನ್ನಡ ಭಾಷೆ ಇದು, ಕರ್ನಾಟಕದಲ್ಲಿಯೇ ಆ ನಮ್ಮ ಪುಣ್ಯಕೋಟಿಯ ಹಾಗೆ, "ಹಿಂದೆ ಬಂದರೆ ಒದೆಯಬೇಡಿ; ಮುಂದೆ ಬಂದರೆ ಹಾಯಬೇಡಿ' ಎಂದು ಹೇಳಬೇಕಾಗಿ ಬಂದಿದೆ.

ನಮ್ಮ ದೃಷ್ಟಿಯಲ್ಲಿ, ಕರ್ನಾಟಕದಲ್ಲಿ ಹುಟ್ಟಿದವರು ಮಾತ್ರ ಕನ್ನಡಿಗರಲ್ಲ. ಕನ್ನಡಕ್ಕಾಗಿ ಹೋರಾಟ ಮಾಡುವವರಷ್ಟೇ ಕನ್ನಡಿಗರಲ್ಲ. ನಾವು, ಕನ್ನಡಕ್ಕಾಗಿ ಕೆಲಸ ಮಾಡಿದವರನ್ನು ಮತ್ತು ಕನ್ನಡದ ಕೆಲಸ ಮಾಡುವವರನ್ನು ಕನ್ನಡಿಗ ಎಂದು ಭಾವಿಸುತ್ತೇವೆ. ಜರ್ಮನ್ ದೇಶದಿಂದ ಕನ್ನಡನಾಡಿಗೆ ಆಗಮಿಸಿ ಕನ್ನಡವನ್ನು ಕಲಿತು ಕನ್ನಡವನ್ನು ಕಟ್ಟಿದ ಫರ್ಡಿನಾಂಡ್ ಕಿಟೆಲ್ ಅಪ್ಪಟ ಕನ್ನಡಿಗ. ೧೮೯೪ರ ಆ ಕಾಲದಲ್ಲಿಯೇ ೭೦೦೦೦ಕ್ಕೂ ಹೆಚ್ಚು ಕನ್ನಡ ಶಬ್ದಗಳನ್ನು ಸಂಗ್ರಹಿಸಿ ಅಚ್ಚುಕಟ್ಟಾಗಿ ನಮಗೆಲ್ಲ ಕನ್ನಡ ನಿಘಂಟುವನ್ನು ಕಟ್ಟಿಕೊಟ್ಟ ಕಿಟೆಲ್ ಕರ್ನಾಟಕದ ಇತಿಹಾಸದಲ್ಲಿ ಚಿರಾಯು ಮತ್ತು ಚಿರಂಜೀವಿಯಾಗಿದ್ದಾನೆ. ಆತ ಅಪ್ಪಟ ಕನ್ನಡಿಗ.

ಜ್ಞಾನಪೀಠ ಪ್ರಶಸ್ತಿಯಿಂದ ಸನ್ಮಾನಿತರಾದ ವರಕವಿ ದ.ರಾ. ಬೇಂದ್ರೆಯವರು, ವಿ.ಕೃ. ಗೋಕಾಕ್ ಇವರೆಲ್ಲರ ಸುತ್ತಮುತ್ತ ಮತ್ತು ಅಕ್ಕಪಕ್ಕ ಮರಾಠಿ ಭಾಷೆಯ ಪ್ರಭಾವ ಮತ್ತು ಮರಾಠಿಯ ವಾತಾವರಣವಿದ್ದರೂ ಇವರೆಂದೂ ಕನ್ನಡವನ್ನು ಬಿಟ್ಟುಕೊಡಲಿಲ್ಲ. ಇವರೆಲ್ಲ "ಆತ್ಮವತ್" ಕನ್ನಡವನ್ನು ಪ್ರೀತಿಸಿಕೊಂಡಿದ್ದರು. ಇವರೂ ಸಹ ಕವಿ ಕುವೆಂಪುರವರ ಹಾಗೆ "ಸಿರಿಗನ್ನಡಂ ಗೆಲ್ಗೆ" ಮತ್ತು "ಸಿರಿಗನ್ನಡಂ ಬಾಳ್ಗೆ" ಎಂದು ಹೇಳಿಕೊಂಡಿದ್ದರು. ಇವರುಗಳು ಕನ್ನಡವನ್ನೇ ತಮ್ಮ ಧರ್ಮಕ್ಷೇತ್ರ ಮತ್ತು ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡರು. ಇವರು "ಭಾಷಾಭೇದ" ಮಾಡದೆ "ಭಾಷಾಬೋಧ" ಮಾಡಿ ಕನ್ನಡ ಭಾಷೆಯನ್ನು ಅಭೇದ್ಯವಾಗಿಸಿದರು. ಇವರು ಕನ್ನಡ ಭಾಷೆಯನ್ನು ಸುಂದರ, ಸುರಸುಂದರಗೊಳಿಸುವುದು ಮಾತ್ರವಲ್ಲ, ಕನ್ನಡ ಭಾಷೆಯ ಸೌಷ್ಠವ, ಸೊಗಡು, ಸೌರಭವನ್ನು ಹೆಚ್ಚಿಸಿದರು.

ಕನ್ನಡ ಭಾಷೆಯನ್ನು ಮುಂದಿಟ್ಟುಕೊಂಡು ಕನ್ನಡದ ಹೆಸರಲ್ಲಿ ಗದ್ದಲ, ಗಲಾಟೆ ಮಾಡುವವರು ಕನ್ನಡಿಗರಲ್ಲ. ನಮ್ಮ ದೃಷ್ಟಿಯಲ್ಲಿ, ಕನ್ನಡಕ್ಕಾಗಿ "ಮಾಡು ಇಲ್ಲವೆ ಮಡಿ" ಉಪಾಧಿಯಲ್ಲಿ ದುಡಿದವರು ಕನ್ನಡಿಗರು.

ಕನ್ನಡದಲ್ಲಿ ಕೈಲಾಸವನ್ನು ಕಂಡವರು ಕನ್ನಡಿಗರು. ಕನ್ನಡವೇ ಕೈಲಾಸವೆಂದವರು ಕನ್ನಡಿಗರು.


ಕನ್ನಡವನ್ನು ಪುಷ್ಟ, ಸುಪುಷ್ಟಗೊಳಿಸಿ ಕನ್ನಡ ಭಾಷೆಯ ಭಾಷಾಸೌಷ್ಠವವನ್ನು ಹೆಚ್ಚಿಸುವವರು ಕನ್ನಡಿಗರು. ನಮ್ಮ ವರನಟ ಡಾ. ರಾಜ್‌ಕುಮಾರ್‌ರವರ ಹಾಗೆ.

ಅತ್ಯಂತ ಸ್ವಚ್ಛವಾಗಿ ಮತ್ತು ಶುದ್ಧವಾಗಿ ಕನ್ನಡವನ್ನು ಉಚ್ಚರಿಸುವವರು ಕನ್ನಡಿಗರು. ಕನ್ನಡವನ್ನು ಮೈ, ಮನಸ್ಸುಗಳೊಡನೆ ಓತಪ್ರೋತಗೊಳಿಸಿಕೊಂಡವರು ಕನ್ನಡಿಗರು.

ಕನ್ನಡಮ್ಮನ ಎದೆಗೆ ಕಿವಿಕೊಟ್ಟು ಅವಳ ಹೃದಯಬಡಿತಕ್ಕೆ ಕಿವಿಯಾದವರು ಕನ್ನಡಿಗರು. ವೇದಿಕೆಗಳಲ್ಲಿ ಕನ್ನಡದ ಬಗ್ಗೆ ಉದ್ದುದ್ದಾಗಿ ಮಾತನಾಡಿ ಮನೆಗೆ ಹೋದ ತಕ್ಷಣ ಮಕ್ಕಳನ್ನು ಕಾನ್ವೆಂಟ್‌ಗೆ ಕಳುಹಿಸುವವರು ಅವರೆಂಥ ಕನ್ನಡಿಗರು?

ಯಾರ ಜೊತೆಯಲ್ಲೂ ದ್ವೇಷವನ್ನು ಸಾಧಿಸದೆ, ಎಲ್ಲರನ್ನೂ ಪ್ರೀತಿಯಿಂದ ಕಾಣುವವರು ಕನ್ನಡಿಗರು, ಏಕೆಂದರೆ ಈ ನಾಡಿನ ನಾಡುಗುರುಗಳಾದ ಬಸವಣ್ಣನವರು ನಮಗೆಲ್ಲ, "ಇವನಾರವ ಎಂದೆನ್ನದೆ ಇವ ನಮ್ಮವ, ಇವ ನಮ್ಮವ" ಎಂದು ಅಂದುಕೊಂಡಿರಲು ಮತ್ತು ಹಾಗೆಂದು ಭಾವಿಸಿಕೊಂಡಿರಲು ನಮಗೆಲ್ಲ ಪಾಠಮಾಡಿದ್ದಾರೆ. ■

## ಕಂಬಾರರು



ಜಾನಪದದ ಗಣಿಯೊಳಗಿಂದ
ಹೆಕ್ಕಿ ತಂದ
ರತ್ನ ಹವಳಗಳನ್ನು
ಕೆಚ್ಚಿ ಆವಿಷ್ಕರಿಸಿ
ನೈಪುಣ್ಯತೆಯ ಶಿಷ್ಟದಾರಕ್ಕೆ ಪೋಣಿಸಿ
ಸೌಂದರ್ಯ ವೃದ್ಧಿಸುವ ಕುಶಲಕರ್ಮಿ

ಸಣ್ಣಾಟ ದೊಡ್ಡಾಟ ಬಯಲಾಟಗಳಿಗಲ್ಲದೆ
ಪಾರಿಜಾತಕ್ಕೂ ಪರಿಮಳವ ಪೂಸಿಸಿ
ದಟ್ಟಿ ದಾವಣಿ ತೊಡಿಸಿ ಶಿಸ್ತಿನಿಂದಾಡಿಸಿ
ರಸದೂಟ ಮಾಡಿಸುವ ಶಾಸ್ತ್ರಪ್ರವೀಣ

ಕಾವ್ಯ ಕನ್ನಿಕೆಯನ್ನು ನಾಟಕ ಪಾಠಕನನ್ನು
ಒಲಿಸಿಕೊಂಡವರು ಚಲನಚಿತ್ರಳನ್ನೂ
ಆಳ ವಿಸ್ತಾರದಲ್ಲಿ ಸ್ವಂತದ ಶೈಲಿಯಲ್ಲಿ
ದರ್ಶನ ಮಾಡಿಸುವರೆ ಹೊಸ ಲೋಕವನ್ನಲ್ಲಿ

ಆ ಪೀಠ ಈ ಪೀಠಗಳ ಈಟೂ ಬಲವಿಲ್ಲದೆ
ಗುಂಪು ಗುಮಾನಿಗಳ ಸನಿಹವೂ ಸುಳಿಯದೆ
ಸಾಹಿತ್ಯಕಾಳಿಕೆಯ ತಪಗೈವ ಕಂಬಾರರು
ಸೃಜನಶೀಲತೆಯನ್ನೆಲ್ಲ ಸಿದ್ಧಿಸಿಕೊಂಡವರು

■ ನಾಡೋಜ ಡಾ. ಮನು ಬಳಿಗಾರ್

# ಪ್ರಾಥಮಿಕ ಹಂತದಲ್ಲಿ ಕನ್ನಡವೇ ಮಾಧ್ಯಮವಾಗಲಿ

**"ತೇರನೇರಿ ಅಂಬರದಾಗೆ ನೇಸರ ನಗುತಾನೆ ಎಂದು ಕವನಿಸಿದ ಪ್ರಸಿದ್ಧ ಕವಿ ದೊಡ್ಡರಂಗೇಗೌಡರು ೮೬ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಕವನ, ಕಥೆ, ಅಂಕಣ ಬರಹ, ವಿಮರ್ಶೆ ಇತ್ಯಾದಿ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲೂ ಬರೆಯುತ್ತ ಬಂದಿರುವ ದೊಡ್ಡರಂಗೇಗೌಡರು ಕನ್ನಡದ ಅನನ್ಯ ಪರಿಚಾರಕ. ಸುಮಧುರ ಗೀತೆಗಳಿಂದ ಕನ್ನಡದ ಮನೆಮನಗಳನ್ನು ತಲುಪಿರುವ ಈ ಸಾಹಿತಿ ಇಲ್ಲಿ ಮಾತಾಗಿದ್ದಾರೆ".**

ಸಂದರ್ಶನ : ವಿದ್ಯಾರಶ್ಮಿ ಪೆಲತ್ತಡ್ಕ

**ಸಮ್ಮೇಳನಾಧ್ಯಕ್ಷರಾಗಿ ಕನ್ನಡ ಭಾಷೆ, ಸಾಹಿತ್ಯವನ್ನು ಪಸರಿಸುವ ನಿಟ್ಟಿನಿಂದ ಏನು ಯೋಜನೆ ಹಮ್ಮಿಕೊಂಡಿದ್ದೀರಿ?**


ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರುಗಳ ಭೇಟಿ ಮಾಡಿ, ತಾಲೂಕು ಮತ್ತು ಹೋಬಳಿ ಕೇಂದ್ರಗಳಲ್ಲಿ ಸಾಹಿತ್ಯ ಪಸರಿಸುವ ಕೆಲಸ ಮಾಡಬೇಕು ಎಂಬ ಯೋಚನೆ ಇದೆ. ಹಿಂದೆ ವಿವಿಗಳ ಪ್ರಸಾರಾಂಗಗಳು ಈ ಬಗೆಯ ಕೆಲಸವನ್ನು ಮಾಡುತ್ತಿದ್ದವು. ಅದನ್ನೀಗ ಯಾರೂ ಮಾಡುತ್ತಿಲ್ಲ. ಅದನ್ನು ಜಿಲ್ಲಾ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಕೈಗೊಂಡರೆ ಅದನ್ನ ಈ ಮೂಲಕ ಮಾಡಬೇಕು ಅನ್ನುವ ಯೋಜನೆ ಇದೆ. ಕನ್ನಡದ ಕೃತಿ, ಕವಿಗಳು, ಭಾಷೆ, ಸಂಸ್ಕೃತಿಯ ಪ್ರಸಾರದ ಬಗ್ಗೆ ಈ ಮೂಲಕ ಗಮನಕೊಡಲು ಸಾಧ್ಯವಾಗುತ್ತದೆ.

**ಸಮ್ಮೇಳನ ನಿರ್ಣಯಗಳು ಹೆಚ್ಚಾಗಿ ಜಾರಿಯಾಗುವುದಿಲ್ಲ, ಈ ಬಾರಿಯ ನಿರ್ಣಯಗಳ ಬಗ್ಗೆ ಏನಾದರೂ ಯೋಚಿಸಿದ್ದೀರಾ?**

ಕನ್ನಡದ ಶಾಲೆಗಳು ಅತ್ಯುತ್ತಮವಾದ ರೀತಿಯಲ್ಲಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಬೇಕಾದ ಕಾಯಕಲ್ಪವನ್ನು ಕೈಗೊಳ್ಳುವ ದಿಸೆಯಲ್ಲಿ ಯೋಚಿಸಿ ಸರ್ಕಾರಕ್ಕೆ ಸಲಹೆ ಕೊಡಬೇಕು ಅಂದುಕೊಂಡಿದ್ದೇನೆ. ಕನ್ನಡದಲ್ಲೇ ಶಿಕ್ಷಣ ಮಾಧ್ಯಮಕ್ಕೆ ಒತ್ತು ಕೊಡಲು ಸೂಚಿಸಬೇಕಿದೆ. ೫ನೇ ತರಗತಿಯಿಂದ ಇಂಗ್ಲಿಷ್ ಕಲಿಸಲಿ, ಆದರೆ ಪ್ರಾಥಮಿಕ ಹಂತದಿಂದಲೇ ಕನ್ನಡ ಕಲಿಕೆ ಬೇಕು. ಇದು ಅತ್ಯುತ್ತಮ ಗ್ರಹಿಕೆ ಮತ್ತು ಭಾಷಾ ಪ್ರಯೋಗದ ನಿಟ್ಟಿನಿಂದ ಬಹಳ ಮುಖ್ಯ.

**ಭಾವಗೀತೆಗಳ ಮೂಲಕ ನೀವು ಮಾಧುರ್ಯವನ್ನು ಪಸರಿಸಿದವರು. ಇಂದು ಗಾಯಕರಿದ್ದಾರೆ, ಆದರೆ ಹೊಸ ಭಾವಗೀತೆಗಳೆ ಬರುತ್ತಿಲ್ಲ ಎನ್ನುತ್ತಿದ್ದಾರಲ್ಲ?**

ಇಲ್ಲವೆಂದಲ್ಲ, ಇದೊಂದು ರೀತಿಯಲಿ ಜಾಣ ಕುರುಡು. ಗಾಯಕರು, ಸಂಯೋಜಕರು ೩೦ ವರ್ಷಗಳಿಂದ ಅವೇ ಹಾಡುಗಳನ್ನು ಹಾಡುತ್ತಿದ್ದಾರೆ. ಹೊಸದನ್ನು ಓದಬೇಕು, ಅವಕ್ಕೆ ಸ್ವರಪ್ರಸ್ತಾರ ಹಾಕಿ ಹಾಡಬೇಕು ಎಂಬ ಆಸಕ್ತಿಯಿಲ್ಲ. ಈ ಧೋರಣೆ ಬದಲಾಗಬೇಕಿದೆ. ಇಂದು ಹೊಸ ಹಾಡುಗಳನ್ನು ಬರೆಯುತ್ತಿದ್ದಾರೆ. ೭೦ರ ದಶಕದಲ್ಲಿ ನಾನು ಎಂ.ಎ ಓದುತ್ತಿದ್ದಾಗ ಜಿ.ಎಸ್.ಎಸ್ ಅವರು 'ಎಲ್ಲ ರೀತಿಯ ಪ್ರಯೋಗಗಳನ್ನು ಮಾಡಬೇಕು ದೊಡ್ಡರಂಗೇಗೌಡ' ಎಂದಿದ್ದರು. ಅಂದಿನಿಂದ ಇಂದಿನವರೆಗೂ ನಾನು ಹಲವು ವೈಚಾರಿಕ ಗೀತೆಗಳು,



ಸಾಮಾಜಿಕ ಪ್ರಜ್ಞೆಯ ಗೀತೆಗಳು, ದೇಶಾಭಿಮಾನ ಮೂಡಿಸುವ ಗೀತೆಗಳು ಇತ್ಯಾದಿ ಹಲವಾರು ಗೀತೆಗಳನ್ನು ಬರೆದಿದ್ದೇನೆ. ಇಂಥವುಗಳ ಬಗ್ಗೆ ಗಮನ ಹರಿಸಬೇಕಷ್ಟೆ.

**ನಿಮ್ಮ ಗೀತೆಗಳಲ್ಲಿನ ಜಾನಪದ ಸೊಗಡು ನಿಮಗೆ ನೈಜ ಅಭಿವ್ಯಕ್ತಿಯಾ ಅಥವಾ ಅದು ಉದ್ದೇಶಪೂರ್ವಕ ಆಯ್ಕೆಯಾ?**

ನನಗೆ ಗೊತ್ತಿರೋದೇ ತುಮಕೂರು ಜಿಲ್ಲೆಯ ಭಾಷೆ. ನಾನು ಅಪ್ಪಟ ಮಣ್ಣಿನ ಮಗ. ನನ್ನೂರು ಮಧುಗಿರಿಯ ಕುರುಬರಹಳ್ಳಿಯ ಸುತ್ತಮುತ್ತಲಿನ ಜನರ ನಾಲಿಗೆಯ ಮೇಲೆ ನಲಿಯುತ್ತಿರುವ ಭಾಷೆಯನ್ನೇ ನನ್ನ ಗೀತೆಗಳಿಗೂ ಆರಿಸಿಕೊಂಡಿದ್ದೇನೆ, ಗೆದ್ದಿದ್ದೇನೆ. ನನಗೆ ಅದು ಸಹಜ ಅಭಿವ್ಯಕ್ತಿ. ಹಾಗಂತ ನಾನು ತರಗತಿಯಲ್ಲಿ ಪಾಠ ಮಾಡೋದಕ್ಕೂ, ಬರೆಯುವುದಕ್ಕೂ, ಸೆಮಿನಾರ್‌ನಲ್ಲಿ ಮಾತಾಡೋದಕ್ಕೂ ವ್ಯತ್ಯಾಸವಿದೆ. ಅವೆಲ್ಲ ಪೊಯೆಟಿಕ್ ಡಿಕ್ಷನ್.

**ನೀವು ಭಾವಗೀತೆಗಳನ್ನೂ ಬರೆದವರು, ನವ್ಯ ಕವನಗಳನ್ನೂ ಬರೆದವರು. ಗದ್ಯದಲ್ಲೂ ಕೃಷಿ ಮಾಡಿದವರು. ಯಾವುದು ನಿಮಗಿಷ್ಟ?**

ನನಗೆ ಇಷ್ಟವಾಗುವುದು ಕಾವ್ಯ. ನನ್ನ ಕಾವ್ಯ ಜನರ ಹೃದಯ ಮುಟ್ಟಬೇಕು. ಅವರು ಅದನ್ನು ಗುನುಗುವಂತಾಗಬೇಕು. ಅದಕ್ಕಾಗಿಯೇ ನಾನು ಪಲ್ಲವಿಯನ್ನು ಬಹಳ ಸರಳಗೊಳಿಸುತ್ತೇನೆ. ಬಳಿಕ ಚರಣವನ್ನು ರೂಪಕಗಳ ಮೂಲಕ ಹೇಳುತ್ತ ಹೋಗುತ್ತೇನೆ.

**ಇಂದು ಚಿತ್ರಗೀತೆಗಳಲ್ಲಿ ಹಿಂದಿನ ಮಾಧುರ್ಯ ಇಲ್ಲ. ಈ ಬಗ್ಗೆ ಏನು ಹೇಳುತ್ತೀರಿ?**

ಬದಲಾದ ಪರಿಸರ ಅದಕ್ಕೆ ಕಾರಣ. ಡಿಜಿಟಲ್ ಬಳಕೆ ಬಂದ ಕಾರಣ ಕಟ್ ಅಂಡ್ ಪೇಸ್ಟ್ ಮಾಡೋದು ಸ್ವರ ಸಂಯೋಜನೆಯಲ್ಲಿಯೂ ಬಂದಿದೆ. ಮೊದಲೆಲ್ಲ ಹಾಗಲ್ಲ. ಜಿ.ಕೆ.ವೆಂಕಟೇಶ್, ಮೈಸೂರು ಅನಂತಸ್ವಾಮಿ, ವಿಜಯಭಾಸ್ಕರ್, ಅಶ್ವತ್ಥ್, ಉಪೇಂದ್ರ ಕುಮಾರ್... ಮೊದಲಾದವರೆಲ್ಲ ಬರೆದ ಗೀತೆಗೆ ಹೇಗೆ ಸಂಗೀತ ಸಂಯೋಜಿಸಿದರೆ ಚೆಂದ ಅಂತ ಯೋಚಿಸುತ್ತಿದ್ದರು. ಕೆ.ವಿ.ಮಹದೇವನ್ ಎಂಬ ತಮಿಳಿನ ಶ್ರೇಷ್ಠ ಸಂಗೀತ ಸಂಯೋಜಕರು, 'ನೀವು ಬರೆದುಕೊಡಿ, ನಾನು ಅದಕ್ಕೆ ಟ್ಯೂನ್ ಹಾಕುತ್ತೇನೆ, ನಿಮ್ಮ ಕವಿತೆಯಲ್ಲೇ ರಾಗ ಇರುತ್ತದೆ' ಎಂದಿದ್ದರು. ಈಗಿನವರು ಟ್ಯೂನ್ ಕೊಟ್ಟು ಹಾಡು ಬರಿ ಅಂದು ತಮ್ಮ ಕೆಲಸ ಸುಲಭ ಮಾಡಿಕೊಂಡಿದ್ದಾರೆ. ಆದರೆ, ಮೊದಲು ಶೂ ತಗೊಳ್ಳೋದಲ್ಲ, ಕಾಲಿನ ಅಳತೆಗೆ ತಕ್ಕಂತೆ ಶೂ ತಗೋಬೇಕು. ದೇಹದ ಆಕಾರಕ್ಕೆ ತಕ್ಕಂತೆ ಬಟ್ಟೆ ಹೊಲಿಸ್ಕೊಬೇಕು. ಕಟ್ಟಡ ಕಟ್ಟಿ ಬಳಿಕ ತಳಪಾಯ ಹಾಕಲು ಹೋದರೆ ಹೇಗೆ?

**ಸಿನಿಮಾವನ್ನು ನಿರ್ದೇಶಿಸಿದ್ದೀರಂತೆ...**

'ಹಾರುವ ಹಂಸಗಳು' ಎಂಬ ಸಿನಿಮಾ ನಿರ್ದೇಶನ ಮಾಡಿದ್ದೇನೆ. ಇದರಲ್ಲಿ ಮಕ್ಕಳು ಗ್ಯಾಜೆಟ್ ಬಳಕೆಯ ಮೂಲಕ ಹೇಗೆ ದಾರಿ ತಪ್ಪುತ್ತಾರೆ ಎಂಬುದನ್ನು ಹೇಳಿದ್ದೇನೆ. ಬ್ಲೂವ್ಹೇಲ್, ಪಬ್ಜಿಯಂತ ಆ್ಯಪ್‌ಗಳಲ್ಲಿ ಆಡುವುದರ ಬಗ್ಗೆ ಬೆಳಕು ಚೆಲ್ಲಿದ್ದೇನೆ. ಏಳು ಘಟನೆಗಳನ್ನು ಪ್ರಮುಖವಾಗಿ ಹೇಳಿದ್ದೇನೆ. ನಾನೇ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿ, ನಟಿಸಿದ್ದೇನೆ ಕೂಡ. ಲಾಕ್‌ಡೌನ್‌ಗೂ ಮೊದಲೇ ಇದು ಚಿತ್ರೀಕರಣಗೊಂಡು ರೆಡಿಯಾಗಿತ್ತು.

**ಹೊಸ ಕಥಾಸಂಕಲನದ ಬಗ್ಗೆ...**

ಹೌದು, ಕೊರೊನಾದಿಂದಾಗಿ ಸಿಕ್ಕ ಏಕಾಂತದಲ್ಲಿ ಬರವಣಿಗೆಗೆ ತಪಸ್ಸಿನ ಥರ ಕೂತು ಬರೆದ ಕಾರಣ ಬಂದ ಕಥೆಗಳು ಇವು. ಆ ಸಮಯದಲ್ಲಿ ದಿನವೂ ಓದೋದು, ಬರೆಯುವುದು ಇಷ್ಟನ್ನೇ ಮಾಡುತ್ತಿದ್ದೆ. ಹೀಗಾಗಿ ಕಥೆಗಳು ಬಂದವು.


**ಮುಂದಿನ ಕೃತಿ?**


ಈಗ ನಾನು ರಾಮಕೃಷ್ಣ ಪರಮಹಂಸರ ಕುರಿತಂತೆ ಮಹಾಕಾವ್ಯ ಬರೆಯುತ್ತಿದ್ದೇನೆ. ಮುಕ್ತ ಛಂದಸ್ಸಿನಲ್ಲಿ ಬರೆಯುತ್ತಿದ್ದೇನೆ. ನನ್ನದೇ ಶೈಲಿಯಲ್ಲಿ ಬರೆಯುತ್ತಿದ್ದೇನೆ. ನಾನು ೧೯೭೦ರಲ್ಲೇ ಕೊಲ್ಕೊತ್ತಾದ ಹೂಗ್ಲಿ ದಂಡೆಯ ಮೇಲೆ ಇರುವ ರಾಮಕೃಷ್ಣ ಮಠಕ್ಕೆ ಹೋಗಿದ್ದೆ. ಆ ಸಂದರ್ಭದಲ್ಲೇ ಅವರ ವಿಚಾರಗಳು ನನ್ನ ಮೇಲೆ ಬಹಳ ಪ್ರಭಾವ ಬೀರಿವೆ. ಆಗಿನಿಂದಲೇ ಈ ವಿಚಾರ ನನ್ನೊಳಗೆ ಇದೆ, ಸದ್ಯ ಕೃತಿರೂಪವನ್ನು ಪಡೆಯುತ್ತಿದೆ. ಆದರೆ, ಈ ಕೃತಿ ರಚನೆಯ ಕೆಲಸಕ್ಕೆ ಸಾಹಿತ್ಯ ಸಮ್ಮೇಳನ ನಿಮಿತ್ತ ಸದ್ಯಕ್ಕೆ ಒಂದು ತಿಂಗಳು ವಿರಾಮ ಕೊಡಬೇಕಿದೆ.


(ಕೃಪೆ : ವಿಜಯ ಕರ್ನಾಟಕ) ■





# ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಪ್ರಥಮ ಬಾರಿಗೆ ಮಹಿಳಾ ಸಾಹಿತ್ಯದ ವಿವಿಧ ಪ್ರಕಾರಗಳ ೮ ಸಂಪುಟಗಳ ಪ್ರಕಟಣೆ















**ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ. ಮನು ಬಳಿಗಾರ್ ಅವರ ಪ್ರಧಾನ ಸಂಪಾದಕತ್ವದಲ್ಲಿ ಹಾಗೂ ಪ್ರೊ. ಮಲ್ಲಿಕಾ ಘಂಟಿಯವರ ಸಂಪಾದಕತ್ವದಲ್ಲಿ 'ಸ್ತ್ರೀವಾದಿ ಚಿಂತನೆ', ಡಾ. ಎಂ.ಎಸ್. ಆಶಾದೇವಿ ಅವರ ಸಂಪಾದಕತ್ವದಲ್ಲಿ 'ವಿಮರ್ಶೆ', ಡಾ. ಪದ್ಮಿನಿ ನಾಗರಾಜು ಅವರ ಸಂಪಾದಕತ್ವದಲ್ಲಿ 'ಕಥೆ', ಡಾ. ಪಿ. ಚಂದ್ರಿಕಾ ಅವರ ಸಂಪಾದಕತ್ವದಲ್ಲಿ 'ಕಾವ್ಯ', ಡಾ. ಗುರುದೇವಿ ಹುಲೆಪ್ಪನವರಮಠ ಅವರ ಸಂಪಾದಕತ್ವದಲ್ಲಿ 'ಜಾನಪದ', ಡಾ. ತಮಿಳ್ ಸೆಲ್ವಿ ಮತ್ತು ಬಾ.ಹ. ರಮಾಕುಮಾರಿ ಅವರ ಸಂಪಾದಕತ್ವದಲ್ಲಿ 'ಲಲಿತ ಪ್ರಬಂಧ', ಡಾ. ಎನ್. ಲಕ್ಷ್ಮಿ ಅವರ ಸಂಪಾದಕತ್ವದಲ್ಲಿ 'ಸಂಕೀರ್ಣ' ಹಾಗೂ ಡಾ. ಪ್ರತಿಭಾ ನಂದಕುಮಾರ್ ಅವರ ಸಂಪಾದಕತ್ವದಲ್ಲಿ 'ಅಂಕಣ ಬರಹ' ಸಂಪುಟಗಳು ಲೋಕಾರ್ಪಣೆಗೆ ಸಿದ್ಧಗೊಂಡಿವೆ.**

# ಕನ್ನಡ ಸಾಹಿತ್ಯ ಪರಿಷತ್ತು

ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೫೬೦ ೦೧೮

ದೂರವಾಣಿ : ೦೮೦–೨೬೬೧೨೯೯೧, ೨೬೬೨೩೫೮೪, kannadaparishattu@gmail.com


ದಿನಾಂಕ : ೩೦–೦೧–೨೦೨೧

## ಸರ್ವ ಸದಸ್ಯರ ಮಹಾಸಭೆಯ ತಿಳಿವಳಿಕೆ ಪತ್ರ

ಕನ್ನಡ ಸಾಹಿತ್ಯ ಪರಿಷತ್ತಿನ ಸಕಲ ಸದಸ್ಯರ

**೧೦೪ ನೆಯ ವಾರ್ಷಿಕಾಧಿವೇಶನವು**

**೨೦೨೧ ಮಾರ್ಚ್ ೧೮ ರಂದು ಗುರುವಾರ ಮಧ್ಯಾಹ್ನ ೧೨.೦೦ ಗಂಟೆಗೆ**

**ಶ್ರೀ ಯೋಗಿ ನಾರೇಯಣ ಸಭಾಂಗಣ, ಸದ್ಗುರು ಶ್ರೀ ಯೋಗಿ ನಾರೇಯಣ ಮಠ**

**ಕೈವಾರ, ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ ಇಲ್ಲಿ**

ಪರಿಷತ್ತಿನ ಅಧ್ಯಕ್ಷರಾದ

**ನಾಡೋಜ ಡಾ. ಮನು ಬಳಿಗಾರ್** ಅವರ

ಅಧ್ಯಕ್ಷತೆಯಲ್ಲಿ ಸಮಾವೇಶಗೊಳ್ಳಲಿದೆ.

ತಾವು ದಯವಿಟ್ಟು ಆಗಮಿಸಬೇಕಾಗಿ ಪ್ರಾರ್ಥನೆ

### ಕಾರ್ಯಸೂಚಿ

ಅ) ಕಾರ್ಯಕಾರಿ ಸಮಿತಿ ಒಪ್ಪಿಸುವ ೨೦೧೯–೨೦೨೦ನೆಯ ಸಾಲಿನ ವಾರ್ಷಿಕ ವರದಿಯನ್ನು ಹಾಗೂ ಆಯ–ವ್ಯಯದ ಬಗ್ಗೆ ಲೆಕ್ಕಪರಿಶೋಧಕರು ಪರಿಶೀಲಿಸಿದ ಲೆಕ್ಕಪಟ್ಟಿಗಳನ್ನು ಅಂಗೀಕರಿಸುವುದು.

ಆ) ೨೦೨೦–೨೦೨೧ನೆಯ ಸಾಲಿನ ವಾರ್ಷಿಕ ಆಯ–ವ್ಯಯ ಅಂದಾಜು ಪಟ್ಟಿಯನ್ನು ಅಂಗೀಕರಿಸುವುದು.

ಇ) ಕಾರ್ಯಕಾರಿ ಸಮಿತಿ ಸೂಚನೆಗಳು.

ಈ) ಸದಸ್ಯರು ನಿಯಮಾನುಸಾರವಾಗಿ ಕಳಿಸಿರುವ ಇತರೆ ಸೂಚನೆಗಳು.

**ಪಿ. ಮಲ್ಲಿಕಾರ್ಜುನಪ್ಪ**
ಗೌರವ ಕೋಶಾಧ್ಯಕ್ಷರು

**ಡಾ. ಪದ್ಮರಾಜ ದಂಡಾವತಿ**
ಗೌರವ ಕಾರ್ಯದರ್ಶಿಗಳು

**ಕೆ. ರಾಜಕುಮಾರ್**
ಗೌರವ ಕಾರ್ಯದರ್ಶಿಗಳು

**ವಿಶೇಷ ಸೂಚನೆ :**

೧. ವಾರ್ಷಿಕ ವರದಿಯನ್ನು ದಿನಾಂಕ ೦೮–೦೩–೨೦೨೧ ರಿಂದ ಪರಿಷತ್ತಿನ ಕಚೇರಿಗೆ ಖುದ್ದಾಗಿ ಬಂದು ಅಥವಾ ಅಂಚೆ ವೆಚ್ಚ ರೂ. ೨೦/– ಕಳುಹಿಸಿ ಪಡೆಯಬಹುದಾಗಿದೆ.

೨. ಮಾನ್ಯ ಸದಸ್ಯರು ದಯವಿಟ್ಟು ತಮ್ಮ ಆಜೀವ ಸದಸ್ಯತ್ವ ಗುರುತಿನ ಚೀಟಿಯನ್ನು ತರಲು ವಿನಂತಿಸಿದೆ.

**ಇದನ್ನೇ ಸಕಲ ಸದಸ್ಯರ ಸಭೆಯ ಆಹ್ವಾನ ಪತ್ರವೆಂದು ದಯಮಾಡಿ ಪರಿಗಣಿಸುವುದು**


ವಿವರಗಳಿಗೆ ಸಂಪರ್ಕಿಸಿ : **ಶ್ರೀ ಕೈವಾರ ಎನ್. ಶ್ರೀನಿವಾಸ**
ಅಧ್ಯಕ್ಷರು, ಚಿಕ್ಕಬಳ್ಳಾಪುರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು
ಶ್ರೀ ನಾರೇಯಣಾಮೃತ ನಿಲಯ, ಸದ್ಗುರು ಶ್ರೀ ಯೋಗಿ ನಾರೇಯಣ ಬಡಾವಣೆ, ಪ್ರಜಾಪಿತ ಬ್ರಹ್ಮಕುಮಾರಿ ಆಶ್ರಮದ ಹತ್ತಿರ
ಕೈವಾರ, ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ–೫೬೩ ೧೨೮ **ಮೊ. ೯೪೪೮೮–೯೧೧೩೦**

# ಕರುನಾಡಿಗೆ ಹೋರಾಟದ 'ಯಜ್ಞದೀಕ್ಷೆ'ಯನ್ನು ಕೊಟ್ಟ 'ಅಶ್ವಮೇಧ'ದ ದೊಡ್ಡರಂಗೇಗೌಡರಿಗೆ ಸಮಸ್ತ ಕನ್ನಡಿಗರ ಅಭಿನಂದನೆಗಳು!

■ ಅಭಿಮನ್ಯು

ಕರುನಾಡಿನ ಭಾವದೀಪ್ತಿಯನ್ನು ಹಿರಿದಾಗಿ ಪೊರೆದ ಈ ಮಣ್ಣಿನ ಸೊಗಡಿನ ಕವಿ ದೊಡ್ಡರಂಗೇಗೌಡರಿಗೆ ಈ ಬಾರಿಯ ಕನ್ನಡ ಸಾಹಿತ್ಯ ಸಮ್ಮೇಳನದ ತೇರನ್ನು ಎಳೆಯುವ ಮಿಗಿಲಾದ ಅವಕಾಶ ಒದಗಿ ಬಂದಿದೆ. ಕನ್ನಡದ ಕಟ್ಟಾಳುವಾದ ದೊಡ್ಡರಂಗೇಗೌಡರು ಈ ನಾಡಿನ ಜನರ ನಾಲಿಗೆಯಲ್ಲಿ ಸದಾ ನಲಿವ ನೆಲಮೂಲದ ಕವಿ. ಕನ್ನಡ ಸಾಹಿತ್ಯ ಪರಂಪರೆಗಿರುವ ಧೀಮಂತಿಕೆ, ವಿಸ್ತಾರ, ಹರವುಗಳನ್ನು ವಿಸ್ತರಿಸಿದ, ನಾಡಿನ ಪ್ರಜ್ಞೆ, ವಿಚಾರ, ವಿವೇಕಕ್ಕೆ ಕಣ್ಣಾಗಿ ಅಮಿತ ಕಾಣ್ಕೆಯನ್ನು ನೀಡಿದ ಸಾಹಿತಿ ಶ್ರೇಷ್ಠರ ಸಾಲಿನಲ್ಲಿ ದೊಡ್ಡರಂಗೇಗೌಡರದು ಅನನ್ಯವಾದ ಸ್ಥಾನ. ಹಾಗಾಗಿಯೇ, ಜನಮೆಚ್ಚಿದ ಈ ಜನಾನುರಾಗಿ ಕವಿಗೆ ೮೬ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರ ಸ್ಥಾನವು ಒಲಿದು ಬಂದಾಗ ಹಿರಿಕಿರಿಯರೆನ್ನದೆ ನಾಡಿನುದ್ದಕ್ಕೂ ಸಂಭ್ರಮಿಸಿದವರೇ ಎಲ್ಲ.

ನವೋದಯದ ನಂತರದ ಕಾಲಘಟ್ಟದಲ್ಲಿ ನವ್ಯದ ಹೊಸ್ತಿಲಿನಲ್ಲಿ ಕುದಿ ಚಿಂತನಾ ಪ್ರವಾಹದ ಪಾಕವಾಗಿದ್ದ ನಾಡಿನ ಸೃಜನಶೀಲ ಲೋಕದಲ್ಲಿ ಮೂಡಿದವರು ದೊಡ್ಡರಂಗೇಗೌಡರು. ಬಹುತೇಕ ಆ ಕಾಲಘಟ್ಟದ ಯುವಪೀಳಿಗೆಯಂತೆಯೇ ಕಾಲೇಜು ಶಿಕ್ಷಣದ ಅನಿವಾರ್ಯತೆಯಿಂದಾಗಿ ನಗರಗಳತ್ತ ನಡೆದು ಬಂದವರು. ತುಮಕೂರು ಹಾಗೂ ಆನಂತರ ಬೆಂಗಳೂರಿನಲ್ಲಿ ದೊಡ್ಡರಂಗೇಗೌಡರು ಪದವಿ, ಸ್ನಾತಕೋತ್ತರ ಪದವಿಯ ಶಿಕ್ಷಣ ಪಡೆದರು. ಈ ವೇಳೆ, ನಾಡಿನುದ್ದಗಲಕ್ಕೂ ಹಬ್ಬಿದ್ದ ಜೀವಪರ, ಜನಪರ, ಸೃಜನಶೀಲ ಚಳವಳಿಗಳ ಸಾಹಿತ್ಯದಲ್ಲಿ ಹದಗೊಂಡರು. ಕನ್ನಡ ಸಾಹಿತ್ಯ ಕ್ಷೇತ್ರದ ದಿಗ್ಗಜರೆಲ್ಲರನ್ನೂ ಗುರುವಾಗಿಯೋ, ಗುರಿಯಾಗಿಯೋ, ಇಲ್ಲವೇ ವಾರಿಗೆಯ ನಾಡಾಡಿಗಳಾಗಿಯೋ ಪಡೆದ ದೊಡ್ಡರಂಗೇಗೌಡರು ಅಂದಿನಿಂದಲೂ ಕಾವ್ಯಕ್ಷೇತ್ರದಲ್ಲಿ, ವೈಯಕ್ತಿಕ ಜೀವನದಲ್ಲಿ ಅಖಂಡ ಸೃಜನಶೀಲತೆಯ ಜೊತೆಜೊತೆಗೇ ಸರಳತೆ, ಸಜ್ಜನಿಕೆ, ನೆಲಕ್ಕಂಟಿದ ಸಹಜತೆಯಿಂದಾಗಿಯೇ ಹಿರಿಕಿರಿಯರಾದಿಯಾಗಿ ಎಲ್ಲರಿಂದಲೂ ಅಕ್ಕರೆಯನ್ನು ಪಡೆದವರು. ಕನ್ನಡ ಸಾಹಿತ್ಯವೂ ಸೇರಿದಂತೆ ಜಗತ್ತಿನ ಎಲ್ಲ ಶ್ರೇಷ್ಠ ಸಾಹಿತ್ಯಕ್ಕೆ ತಮ್ಮನ್ನು ಒಡ್ಡಿಕೊಂಡ ದೊ.ರಂ.ಗೌ ಅನುಪಮ ಸಾಹಿತ್ಯಾನ್ವೇಷಿ, ಅದ್ವಿತೀಯ ಗುಣಗ್ರಾಹಿಯಾಗಿ ಸದಭಿರುಚಿಯ ಗುರುವಾಗಿ, ಕವಿಯಾಗಿ ನಾಡಿನುದ್ದಗಲಕ್ಕೂ ಜನಮಾನಸವನ್ನು ಪೊರೆದ ಸಿರಿ ಚೇತನ.

ನವ್ಯ, ಬಂಡಾಯ, ದಲಿತ ಚಳವಳಿಗಳು, ಎಪ್ಪತ್ತು-ಎಂಭತ್ತರ ದಶಕದ ಸಾಮಾಜಿಕ ಚಳವಳಿಗಳು, ರಂಗಚಳವಳಿಗಳು, ಚಿತ್ರರಂಗದ ಸೃಜನಶೀಲ ಪ್ರಯೋಗಗಳು ಈ ಎಲ್ಲದರಲ್ಲಿ ಸಹಪಥಿಕನಾಗಿ, ಸಂಗಾತಿಯಾಗಿ, ಹಲವು ಕ್ರಿಯಾಶೀಲ ಪ್ರಯೋಗಗಳಲ್ಲಿ ಹೆಸರಿನ ಹಂಗಿಲ್ಲದೆ ಎಲೆಮರೆಯ ಕಾಯಿಯಂತೆ ದುಡಿದವರು ದೊಡ್ಡರಂಗೇಗೌಡರು. ಆದರೆ, ಅವರೆಂದೂ ನೆಲಮೂಲದಿಂದ ಪಡೆದ ಅಸ್ಮಿತೆಯನ್ನು ಬಿಟ್ಟುಕೊಟ್ಟವರಲ್ಲ; ಗಾಳಿ, ಬೆಳಕು ಎಲ್ಲೆಡೆಯಿಂದಲೂ ಬರಲಿ, ಸತ್ವವು ಈ ನೆಲಮೂಲದ್ದಿರಲಿ ಎನ್ನುವ ಅಪ್ಪಟ ದೇಸೀ ಸೃಜನ ಶಕ್ತಿಯ ಬಗ್ಗೆ ತಮ್ಮ ಕಾವ್ಯಸೃಷ್ಟಿಯ ಆರಂಭದ ದಿನಗಳಿಂದಲೇ ಖಚಿತಗೊಂಡಿದ್ದ ದೊಡ್ಡರಂಗೇಗೌಡರು ಈ ಕಾರಣಕ್ಕೆ ತಮ್ಮ ವಾರಿಗೆಯ ಹಿರಿಕಿರಿಯ ಸಾಹಿತಿಗಳಿಗಿಂತ ಬಲುಬೇಗನೇ ಸ್ವಂತಿಕೆಯಲ್ಲಿ ಹದಗೊಂಡರು.

ಪ್ರತಿರೋಧದ ನೆಲೆಗಳಲ್ಲಿ, ಅಂಚಿನಲ್ಲಿದ್ದ ಸಮುದಾಯಗಳು ಕೇಂದ್ರದೆಡೆಗೆ ಚಲಿಸುವ ಪ್ರಯತ್ನದಲ್ಲಿ ಮೂಡಿಬಂದ ಸಾಹಿತ್ಯಕ ಚಿಂತನೆಗಳು, ಖಡ್ಗದ ಹರಿತದ ಕಾವ್ಯದ ಸೆಲೆಗಳನ್ನು ಆಪ್ತವಾಗಿಯೇ ಕಂಡ ಕವಿ ಹೃದಯಿ ಗೌಡರು ಭಾವಪ್ರದಾಯಿಯಾಗಿ ಈ ಎಲ್ಲ ಬೆಳವಣಿಗೆಗಳನ್ನು ಗ್ರಹಿಸಿದವರು. ಸಾಹಿತ್ಯ ಸೃಷ್ಟಿಯ ಸಹಜತೆಯನ್ನು ಬಿಡದೆ, ಭಾವದಿಂದಲೇ ನೋವುನಲಿವಿಗೆ ದೀವಟಿಗೆಯಾಗಿ ಒದಗುವ ಗುನುಗುನುಗುವ ಸಾಹಿತ್ಯ ಬರೆದವರು. ಅವರ ಗೀತೆಗಳಲ್ಲಿನ ಪ್ರಕೃತಿಯ ಸಾನಿಧ್ಯವನ್ನು ಗ್ರಹಿಸಿದವರಿಗೆ ಅಲ್ಲಿ ಮಾಧುರ್ಯ, ಸೊಗಡಿನೊಟ್ಟಿಗೇ ನೆಲಮೂಲದ ವಿವೇಕವು ಗೋಚರಿಸಲು ಹೆಚ್ಚು ಸಮಯ ಹಿಡಿಯುವುದಿಲ್ಲ. ಪ್ರಯೋಗಶೀಲತೆಯು ಮುಖ್ಯವಾಹಿನಿಯನ್ನು ಪ್ರವೇಶಿಸದೆ ಪಲ್ಲಟಗಳು ಸಂಭವಿಸಲಾರವು ಎನ್ನುವುದನ್ನು ಅರಿತ ದೊಡ್ಡರಂಗೇಗೌಡರು ಕಾವ್ಯದೆಡೆಗಿನ ಜನಮಾನಸದ ಗ್ರಹಿಕೆಯು ವಿಸ್ತಾರವಾಗಬೇಕಾದರೆ ಜನಪ್ರಿಯ ಮಾಧ್ಯಮಗಳಲ್ಲಿ ದೇಸೀ ಕಾವ್ಯಶಕ್ತಿಯ ಆವಾಹನೆಯಾಗಬೇಕು ಎನ್ನುವುದನ್ನು ಕವಿಯಾಗಿ ಹರಳುಗಟ್ಟಲು ತೊಡಗಿದ ಆರಂಭದ ದಿನದಿಂದಲೂ ಗುರುತಿಸಿದರು. ತನ್ನ ಕಾಲಮಾನದ ಹಿರಿಕಿರಿಯ ಕವಿಗಳು ಸಿನಿಮಾ ಸಾಹಿತ್ಯದೆಡೆಗೆ, ಭಾವಗೀತೆಗಳೆಡೆಗೆ ಮಡಿವಂತಿಕೆಯನ್ನು ಬೆಳಸಿಕೊಂಡಿದ್ದ ದಿನಗಳಲ್ಲಿ, ಮುಖ್ಯವಾಹಿನಿಯ ಸಿನಿಮಾಗಳಿಂದ ಅಂತರಕಾಯ್ದುಕೊಳ್ಳುತ್ತಿದ್ದ ಕಾಲಘಟ್ಟದಲ್ಲಿ ದೊರಂಗೌ ಅವರು ಜನಮಾನಸದಲ್ಲಿ ದೇಸೀ ಸತ್ವ, ತತ್ವಗಳನ್ನು ಮಿಳಿತಗೊಳಿಸಲು ಮುಖ್ಯವಾಹಿನಿ ಚಲನಚಿತ್ರರಂಗದಲ್ಲಿರುವ ವಿಫುಲ ಅವಕಾಶಗಳನ್ನು ಗುರುತಿಸಿ ಅನ್ವೇಷಣಾಶಾಲಿಯಾದವರು.

## ಎದೆಯೊಳಗಣ ಹಾಡಾಗಿ ಬಂತು ದೇಸೀ ಕಾವ್ಯ:

ಆಲಂಕಾರಿಕ ಪದಪುಂಜಗಳಲ್ಲಿ, ಮೃದುಮಧುರ ರಮ್ಯ ಗೀತೆಗಳಲ್ಲಿಯೇ ಬಹುತೇಕವಾಗಿ ಸೀಮಿತಗೊಂಡಿದ್ದ ಚಲನಚಿತ್ರ ಗೀತ ಸಾಹಿತ್ಯವನ್ನು ದೇಸಿ ಸೊಗಡಿಗೆ ಹೊರಳಿಸಿದ ಹಿರಿದಾದ ಶ್ರೇಯ ಗೌಡರಿಗೆ ಸಲ್ಲಬೇಕು. ಕೃತಕತೆಯಲ್ಲಿ ಬಂಧಿಯಾಗಿ, ಗ್ರಾಂಥಿಕತೆಯ ಸೊಬಗತೆಯಲ್ಲಿ ಸೆರೆಗೊಂಡಿದ್ದ ಗೀತರಚನೆಗೆ ದೇಸೀ ಕಣ್ಣನ್ನು, ಹಳ್ಳಿಗಾಡಿನ ಒನಪನ್ನು, ಎಲ್ಲಕ್ಕಿಂತ ಮಿಗಿಲಾದ ಜಾನಪದೀಯ ಲಯವನ್ನು ಕೊಟ್ಟವರು ದೊರಂಗೌ. ನಭೋಮಂಡಲದಲ್ಲಿ ಸೂರ್ಯ ಚಂದ್ರಾದಿ ನಕ್ಷತ್ರಗಳೆಂದು ಬಂಧಿಗಳಾಗಿದ್ದ ಉಪಮೆಗಳು, ಪುರಾಣಜನ್ಯ ಕಥನಗಳನ್ನು ಕೊಡವಿ 'ತೇರ ಏರಿ ಅಂಬರದಾಗೆ ನೇಸರು ನಗುತಾನೆ' ಎಂದು ಜನರ ಬಗಲಿಗೆ ಕಾವ್ಯದ ಬೆರಗನ್ನು ಕರೆತಂದ ಗೌಡರು, ಬೇಲಿ ಮ್ಯಾಗಲ ಬಣ್ಣದ ಹೂವುಗಳ ಸಹಜ ಸೌಂದರ್ಯವನ್ನು ಬೆಳ್ಳಿ ಪರದೆಗೆ ಹೊತ್ತೊಯ್ದವರು. ಕನ್ನಡದ ನುಡಿಗಟ್ಟು, ಕಂಪನ್ನು ಸೊಂಪಾಗಿ ನಾಡಿನುದ್ದಗಲಕ್ಕೂ ಹರವಿದವರು.

ದೊರಂಗೌ ಕನ್ನಡಿಗರ ಭಾವಕೋಶವನ್ನು ಹೊಕ್ಕಿರುವ ಪರಿಯನ್ನು ಗಮನಿಸಿದರೆ ಸೋಜಿಗವಾಗುತ್ತದೆ. ಬಹುಶಃ ಮುಂಜಾನೆಯ ಚೈತನ್ಯದ ನೇವರಿಕೆಯಿಂದ ಹಿಡಿದು ಇರುಳಿನ ದುಮ್ಮಾನದ ಬಿಕ್ಕಳಿಕೆಯವರೆಗೆ, ನವಿರು ಪ್ರೇಮದ ಕನವರಿಕೆಗಳಿಂದ ಹಿಡಿದು ಉರಿವ ರೋಷಾಗ್ನಿಯ ಕೆಂದಾಪದವರೆಗೆ ಪ್ರತಿಯೊಂದು ಭಾವತಂತುವನ್ನು ನರನಾಡಿಗಳಲ್ಲಿ ಶಬ್ದ ಪ್ರವಾಹವಾಗಿ ರೂಪಿಸಿದ ಅವರ ಹಮ್ಮಿಲ್ಲದ ಸೃಜನತೆಯನ್ನು ಸರಳ ಮಾತುಗಳಲ್ಲಿ ಹಿಡಿದಿಡಲಾಗದು. ತಮ್ಮ ಕವಿತ್ವದ ಕಂದೀಲಿನಲ್ಲಿ ಕರುನಾಡನ್ನು ತೋರಿದ, ಇಲ್ಲಿನ ಬದುಕು, ಬಾಳುವೆಯನ್ನು ಚಿತ್ರಿಸಿದ ಪರಿಗೆ ಕನ್ನಡಿಗರು ದೊಡ್ಡರಂಗೇಗೌಡರಿಗೆ ಅನವರತ ಚಿರಋಣಿಗಳು.

ಮೇಲಿನ ಮಾತುಗಳ ಸತ್ವವನ್ನು ಖಚಿತಪಡಿಸಿಕೊಳ್ಳಬೇಕೆಂದರೆ ಕಳೆದ ನಾಲ್ಕೂವರೆ ದಶಕಗಳಲ್ಲಿ ಗೌಡರು ಕನ್ನಡಿಗರ ಉಸಿರಿನಲ್ಲಿ ಭಾವವಾಗಿ ಬೆರೆತಿರುವ ಪರಿಯನ್ನು ಅರಿಯಬೇಕು. 'ನಮ್ಮೂರ ಮಂದಾರ ಹೂವೆ, ನನ್ನೊಲುಮೆ ಬಾಂದಳದ ಚೆಲುವೇ' ಎಂದಾಗಲಿ, 'ಭೂಮಿ ತಾಯಾಣೇ ನೀ ಇಷ್ಟಾ ಕಾಣೆ' ಎಂದಾಗಲಿ ಗುನುಗಿಕೊಳ್ಳದ ಕನ್ನಡಿಗರನ್ನು ಕಾಣಲು ಸಾಧ್ಯವೇ? 'ನೋಟದಾಗೆ ನಗೆಯ ಮೀಟಿ, ಮೋಜಿನಾಗೆ ಎಲ್ಲೆಯ ದಾಟಿ'ದ ಹಾಡಿನ ಮೋಡಿಗೆ ತಲೆದೂಗದವರು ಇದ್ದಾರೆಯೇ? ಅಪ್ಪಟ ಕನ್ನಡತನದ, ಈ ಮಣ್ಣಿನ ಭಾವಸಂವೇದನೆಯ ಈ ಗೀತೆಗಳ ಸಹಜತೆ, ಇಂಪುತಂಪಿಗೆ ಮನಸೋಲದ ಕನ್ನಡಿಗರಿಲ್ಲ. ಅದೇ ರೀತಿ, 'ನಲಿದಾಡೋ ಕಾಮನಬಿಲ್ಲೆ, ಹರಿದಾಡೋ ಮುಗಿಲಿನ ಮಿಂಚೇ' ಎಂದೋ, 'ಹೃದಯ ಗೀತೆ ಹಾಡುತಿರೆ, ಭೂಮಿ ಸ್ವರ್ಗವಾಗಿದೆ' ಎಂದೋ ಇಂದಿಗೂ ಅದೇ ತಾಜಾತನದಲ್ಲಿ ಮೇಲಿನ ಹಾಡುಗಳನ್ನು ವಯಸ್ಸಿನ ಹಂಗಿಲ್ಲದೆ ಪ್ರೇಮಿಗಳು ಗುನುಗುನಿಸುವಾಗ ಕಣ್ಣರಳದೆ ಇರುವುದಿಲ್ಲ. 'ಕೇಳಿಸದೆ ಕಲ್ಲುಕಲ್ಲಿನಲಿ ಕನ್ನಡ ನುಡಿ, ಕಾಣಿಸದೆ ಹೊನ್ನ ಚರಿತೆಯಲಿ ಹಂಪೆಯ ಗುಡಿ,' ಎಂದು ವಿಜಯನಗರದ ವೈಭವವನ್ನು ಕನ್ನಡಿಗರು ಧ್ಯಾನಿಸುವಾಗ, 'ಕನ್ನಡ ನಾಡಿನ ರನ್ನದ ರತುನ ಕೇಳೋ ಕತೆಯನ್ನಾ ನಾ ಹೇಳೋ ಕತೆಯನ್ನ' ಎಂದು ಕನ್ನಡದ ಹೆಮ್ಮೆಯ ಹೊಯ್ಸಳ ಸಾಮ್ರಾಜ್ಯದ ಹುಟ್ಟನ್ನು ಮೆಲಕು ಹಾಕುವಾಗ ಕವಿಯೊಬ್ಬ ನಾಡುನುಡಿಯಲ್ಲಿ ಸಾರ್ಥಕ್ಯವಾಗಿರುವ ಪರಿ ನಮ್ಮ ಮುಂದೆ ವಿಧಿತವಾಗುತ್ತದೆ.

ಇನ್ನು ಕನ್ನಡಿಗರ ಜನಮಾನಸದಲ್ಲಿ ಸದಾ ನೆಲೆಸಿರುವ ಡಾ. ರಾಜ್ ಕುಮಾರ್ ಅವರ ಕಂಚಿನ ಕಂಠದಲ್ಲಿ ಮೂಡಿಬಂದ ದೊಡ್ಡರಂಗೇಗೌಡರು ರಚಿಸಿದ 'ಹೃದಯಸಮುದ್ರ ಕಲಕಿ, ಹೊತ್ತಿದೆ ದ್ವೇಷದ ಬೆಂಕಿ' ಎನ್ನುವ ಹಾಡಿನ ಒಂದು ಸಾಲು ಸಾಕು, ಯಾವುದೇ ಕನ್ನಡಿಗ ತನ್ನ ಎಂತಹದೇ ಅಸ್ಥಿರದ ಗಳಿಗೆಯಲ್ಲಿಯೂ ಸಿಂಹಘರ್ಜನೆಯೊಂದಿಗೆ ಯಾವುದೇ ಚಕ್ರವ್ಯೂಹವನ್ನು ಭೇದಿಸಿ ಮುನ್ನುಗ್ಗಲು ಬೇಕಾದ ಸ್ಥೈರ್ಯವನ್ನು ಮರಳಿ ಪಡೆಯಲು. ಇಂತಹ ನಮ್ಮ ನಿಮ್ಮೆಲ್ಲರ ದೊಡ್ಡರಂಗೇಗೌಡರನ್ನು ಒಂದೇ ಗುಕ್ಕಿಗೆ 'ನಾಡದ್ರೋಹಿ'ಯೆಂದು ಜರಿಯಲು ಮುಂದಾದವರು, ಕನಿಷ್ಠ ಈ ಹಾಡಿನ ಒಂದೊಂದು ಸಾಲಿನಲ್ಲಿ ಇರುವ ಅಖಂಡ ಶಕ್ತಿ ಹಾಗೂ ಅದರೊಟ್ಟಿಗೆ ಪ್ರವಾಹದೋಪಾದಿಯಲ್ಲಿ ಉಕ್ಕಿಬರುವ ಡಾ. ರಾಜ್ ಅವರ ದನಿ ಎಷ್ಟೆಲ್ಲಾ ಕನ್ನಡಪರ ಹೋರಾಟಗಳನ್ನು ಪ್ರಚಂಡಶಕ್ತಿಯಾಗಿ ಪೊರೆದಿದೆ ಎನ್ನುವುದನ್ನೊಮ್ಮೆ ಗಮನಿಸಬೇಕಿತ್ತು. ಗೌಡರನ್ನು ಜರಿಯಲು ಮುಂದಾದರೇನು ಈ ಹಾಡಿನ ಧೀಶಕ್ತಿ ಕುಸಿದೀತೇ? ಮುಂದೆಯೂ ಕನ್ನಡಿಗರ ನೂರಾರು ಹೋರಾಟಗಳ ಕಿಚ್ಚಾಗಿ, ಎದೆಯ ಆವೇಗವಾಗಿ ಈ ಹಾಡು ಮಾರ್ದನಿಸುತ್ತಲೇ ಇರಲಿದೆ.

ದೊಡ್ಡರಂಗೇಗೌಡರೊಂದಿಗೆ ಸೈದ್ಧಾಂತಿಕವಾಗಿ ತುರೀಯ ಭಿನ್ನಾಭಿಪ್ರಾಯವುಳ್ಳವರೂ ಕೂಡ ಅವರನ್ನೆಂದೂ ಕನ್ನಡದ್ರೋಹಿ ಎನ್ನುವ ಕೀಳು ಮಟ್ಟಕ್ಕೆ ಇಳಿಯಲಾರರು. ಹಾಗೆ ಮಾಡುವುದು ಈ ನಾಡಿನ ಭಾವಕೋಶವನ್ನೇ ಧಿಕ್ಕರಿಸಿದಂತೆ.



'ಅಶ್ವಮೇಧ'ದ ಕಹಳೆ ಮೊಳಗಿಸಿದ, ಕನ್ನಡಿಗರಿಗೆ 'ಯಜ್ಞದೀಕ್ಷೆ'ಯನ್ನು ಕೊಟ್ಟು ಹೋರಾಟದ ಕಿಚ್ಚನ್ನು ಹಚ್ಚಿದ, ಸ್ವತಃ ತಾವೇ ಕನ್ನಡದ ಯಜ್ಞ ದೀಕ್ಷೆ ತೊಟ್ಟು ಕನ್ನಡದ ಕಹಳೆ ಮೊಳಗಿಸಲು ಜಗತ್ತನ್ನೆಲ್ಲಾ ಸುತ್ತಿಬಂದಿರುವ ಗೌಡರು ನಾಡದ್ರೋಹಿ ಎಂದಾದರೆ ನಾಡಪ್ರೇಮಿಗಳು ಯಾರು ಎನ್ನುವುದನ್ನು ಮೊದಲು ಸ್ಪಷ್ಟಪಡಿಸಬೇಕಾಗುತ್ತದೆ. ಸೈದ್ಧಾಂತಿಕ ಭಿನ್ನಾಭಿಪ್ರಾಯಗಳು, ಅಭಿಪ್ರಾಯಭೇದಗಳು ಸದಾ ಸ್ವಾಗತಾರ್ಹ. ಅದರೆ, ಅವುಗಳೆಂದೂ ಕೀಳುಸ್ವರೂಪದ ಕೆಸರೆರಚಾಟಕ್ಕೆ, ವೈಯಕ್ತಿಕ ನೆಲೆಗಟ್ಟಿನಲ್ಲಿ ಚಾರಿತ್ರ್ಯಹನನಕ್ಕೆ ಇಳಿಯಬಾರದು. ದೊರಂಗೌ ಅವರನ್ನು ಕನ್ನಡ ಸಾಹಿತ್ಯ ಸಮ್ಮೇಳನದಿಂದ ಬೇರ್ಪಡಿಸಲು ಹೊರಟವರು ಕನ್ನಡಿಗರ ಭಾವಕೋಶಗಳಿಂದ ದೊರಂಗೌ ಅವರನ್ನು ಬೇರ್ಪಡಿಸಲು ಸಾಧ್ಯವೇ ಎಂದು ಆಲೋಚಿಸಬೇಕಿತ್ತು.

### ಜಾನಪದ ಜಂಗಮನ ಕಾವ್ಯ ಜೋಳಿಗೆ

ಜಾನಪದವೆನ್ನುವುದು ಮುಖ್ಯವಾಹಿನಿಯಲ್ಲಿ ಅಸಡ್ಡೆಗೆ ತುತ್ತಾಗಿದ್ದ ಹೊತ್ತಲ್ಲಿ ದೊಡ್ಡರಂಗೇಗೌಡರು ಅದನ್ನು ಒಂದೆಡೆ ಮುಖ್ಯವಾಹಿನಿ ಚಲನಚಿತ್ರ ಮಾಧ್ಯಮದಲ್ಲಿಯೂ, ಮತ್ತೊಂದೆಡೆ ಅಕೆಡೆಮಿಕ್ ವಲಯದಲ್ಲಿಯೂ ಏಕಕಾಲಕ್ಕೆ ಗಂಭೀರವಾಗಿ ಪರಿಚಯಿಸಿದವರು. ನಾಡಿನುದ್ದಗಲಕ್ಕೂ ವ್ಯಾಪಕವಾಗಿ ಕ್ಷೇತ್ರಕಾರ್ಯ ಕೈಗೊಂಡು ಜಾನಪದ ಕಾವ್ಯಗಳು, ಕಥನಗಳ ಸಂಗ್ರಹದಲ್ಲಿ ತೊಡಗಿದವರು. ದೊರಂಗೌ ಅವರು ಕೈಗೊಂಡ ಈ ಜಾನಪದ ಕ್ಷೇತ್ರಕಾರ್ಯ ಮುಂದೆ ನೂರಾರು ಸಾಹಿತ್ಯ ವಿದ್ಯಾರ್ಥಿಗಳು ಕ್ಷೇತ್ರಕಾರ್ಯವನ್ನು ಕೈಗೊಳ್ಳಲು ಸ್ಫೂರ್ತಿಯಾಯಿತು. ಗೌಡರ ಈ ಕ್ಷೇತ್ರಕಾರ್ಯ ಕರುನಾಡಿನೊಳಗೆ ಮಾತ್ರವೇ ಸೀಮಿತವಾಗಲಿಲ್ಲ, ಕರುನಾಡಿನಾಚೆಗೂ ವಿಸ್ತರಿಸಿದೆ. ಕೆಲ ವರ್ಷಗಳ ಹಿಂದೆ ಅವರು ಗ್ರೀಸ್ ನ ಅಲೆಕ್ಸಾಂಡ್ರಿಯಾದ ಗ್ರಂಥಾಲಯ ಸ್ಮಾರಕವೊಂದರಲ್ಲಿ 'ಊರಲ್ಲಿ' ಎನ್ನುವ ಕನ್ನಡ ಪದವನ್ನು ಕೊರೆದಿರುವುದನ್ನು ಪತ್ತೆ ಹಚ್ಚಿದ್ದರು. ಕನ್ನಡ ಭಾಷೆಯ ಪ್ರಾಚೀನತೆ ಹಾಗೂ ಹೊರದೇಶಗಳೊಂದಿಗೆ ಅದು ಹೊಂದಿದ್ದ ಸಂಪರ್ಕವನ್ನು ನಿರೂಪಿಸಲು ಶಾಸ್ತ್ರೀಯ ಭಾಷೆ ಸ್ಥಾನಮಾನವನ್ನು ಪಡೆಯುವ ವೇಳೆಯಲ್ಲಿ ಈ ಪದಕ್ಕೆ ಸಂಬಂಧಿಸಿದ ದಾಖಲೆಗಳನ್ನೂ ಸಹ ಪ್ರಮುಖವಾಗಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದನ್ನು ಹಾಗೂ ಅದು ಪರಿಗಣಿತವಾದದ್ದನ್ನು ಇಲ್ಲಿ ನೆನೆಯಬಹುದು.

'ಕೋಲು ಮಂಡೆ ಜಂಗಮ ದೇವರು ಗುರುವೇ ಕ್ವಾರಣ್ಯಕ್ಕೆ ದಯಮಾಡವ್ರೇ?' ಎಂದು 'ಜನುಮದ ಜೋಡಿ' ಯಶಸ್ವಿ ಚಿತ್ರದ ಮೂಲಕ ನಾಡಿನ ಮನೆಮನೆಗೆ ಮಲೆ ಮಹದೇಶ್ವರನ ಕಂಸಾಳೆ ಗೀತೆಯನ್ನು ಪರಿಚಯಿಸಿದ ಗೌಡರು ಜಾನಪದ ಖನಿ. ಜಾನಪದ ಅಧ್ಯಯನ ಶಿಸ್ತು ಕನ್ನಡದಲ್ಲಿ ವಿಕಸಿತಗೊಳ್ಳುವಲ್ಲಿ ಗೌಡರು ಹಾಕಿಕೊಟ್ಟ ಮೇಲ್ಪಂಕ್ತಿ ದೊಡ್ಡದು. ಇದೇ ರೀತಿ, ಕನ್ನಡದಲ್ಲಿ ಪ್ರಗಾಥ ಸಾಹಿತ್ಯವನ್ನು ವಿಶೇಷವಾಗಿ ಪರಿಚಯಿಸಿದ ದೊರಂಗೌ ೪೦೦ಕ್ಕೂ ಅಧಿಕ ಪ್ರಗಾಥಗಳ ಮೂಲಕ ಸಾಹಿತ್ಯ ಸೃಜನತೆಯನ್ನು ಮೆರೆದವರು. ತಾವು ಆಡಿಬೆಳೆದ ಮಧುಗಿರಿಯ ಏಕಶಿಲಾ ಬೆಟ್ಟದ ಘನವಾದ ಮೈಯಂತೆ ಅವರ ಪ್ರಗಾಥಗಳ ದೀರ್ಘ ಹೆಣಿಗೆಗಳು ಕೂಡ ಕಾವ್ಯಾಸಕ್ತರಿಗೆ ದಿವಿನಾದ ಚಾರಣವೇ ಸರಿ.

### ಭಾವ ಗಾರುಡಿಯಲ್ಲಿ ತತ್ವ ದೀವಟಿಗೆ

ಕನ್ನಡ ಕಲಾರಸಿಕರ, ಶ್ರೀಸಾಮಾನ್ಯರ ಹೃದಯಕ್ಕೆ ಹತ್ತಿರವಾದ ಭಾವಗೀತೆಗಳ ಲೋಕದಲ್ಲಿ ಸಂಚರಿಸುವ ಪ್ರತಿಯೊಬ್ಬರೂ ಗೌಡರ ಗೀತಗೇಯಾತ್ಮಕತೆಯೊಳಗೆ ಮುಳುಗಿ ಹಗುರಾದವರೇ ಆಗಿರುತ್ತಾರೆ. ಬಹುಶಃ ಕೆ.ಎಸ್. ನರಸಿಂಹಸ್ವಾಮಿಯವರ ನಂತರ ಕನ್ನಡಿಗರ ಭಾವದೀಪ್ತಿಯನ್ನು ಅನನ್ಯ ಪರಿಯಲ್ಲಿ ಪ್ರಭಾವಿಸಿ, ಪ್ರಕಾಶಿಸಿ, ಉದ್ದೀಪಿಸಿದ ಬೆರಳೆಣಿಕೆಯವರಲ್ಲಿ ದೊಡ್ಡರಂಗೇಗೌಡರ ಹೆಸರು ಬಲು ದೊಡ್ಡದು. ಮಾವು-ಬೇವು, ಹೋಳಿ ಹುಣ್ಣಿಮೆ, ಹೂವು ಹಣ್ಣು ಮುಂತಾದ ಹಲವು ಭಾವಗೀತೆಗಳ ಗುಚ್ಛಗಳು ನಾಡ ಜನರ ಬದುಕು ಬವಣೆಗಳಿಗೆ ಮಿಡಿದ ಭಾವತಂತುಗಳಾಗಿವೆ. 'ಗಾಳಿಗೊಡ್ಡಿದಾ ದೀಪದಂತೆ ನಮ್ಮ ಬಾಳುವೆ?' ಎಂದು ಬದುಕಿನ ಭಂಗುರತೆಯ ಧ್ವನಿಸುತ್ತಾ ಜೀವನದ ಕಹಿಸತ್ಯಗಳನ್ನು ಅರಗಿಸಿಕೊಳ್ಳಲು ಬೇಕಾದ ಮನೋಧರ್ಮವನ್ನು ಜನಸಮೂಹಕ್ಕೆ ದಾಟಿಸಿದ ಗೌಡರು ಜನಸಾಮಾನ್ಯರ ಬಾಳಿಗೆ ಅನುದಿನವೂ ಒದಗಿಬಂದ ಕವಿದನಿ.

ನವ್ಯ ಕಾವ್ಯ, ಭಾವಗೀತೆಗಳು, ಪ್ರಗಾಥಗಳು, ಮುಕ್ತಕಗಳು, ಗದ್ಯ, ಅಂಕಣಬರಹ, ವಿಮರ್ಶೆ, ಜೀವನ ಚರಿತ್ರೆ ಮತ್ತು ಮತ್ತೆಮತ್ತೆ ಕೇಳುಗರ ಕಿವಿಯಲ್ಲಿ ಝೇಂಕರಿಸುವ ಚಲನಚಿತ್ರಗೀತೆಗಳು- ಹೀಗೆ ಈ ಹಿರಿತನದ ಕವಿಗೆ ಯಾವುದೂ ಮೇಲುಕೀಳಲ್ಲ. ಜನಪರತೆಯಿಂದಲೇ ಜನಪ್ರಿಯರಾದ ದೊಡ್ಡರಂಗೇಗೌಡರು ಸಾಹಿತ್ಯ ಜಗತ್ತಿನಾಚೆಗೂ ಅದೇ ಧೀಮಂತಿಕೆಯ ವ್ಯಕ್ತಿತ್ವದಿಂದ ಕಲಿಕಾರ್ಥಿಗಳಿಗೆ ಗುರುವಾಗಿ, ನೊಂದವರಿಗೆ ಸಾಂತ್ವನದ ಬಂಧುವಾಗಿ, ಯಾಚಕರಿಗೆ ಕೈನೀಡುವ ಅಂತಃಕರಣದ ಸೃಜನನಾಗಿ ಗುಣಸಂಪನ್ನತೆಯಿಂದಲೇ ಆದರ್ಶಪ್ರಿಯರಾದವರು.

ಕಿರಿಯ ವಯಸ್ಸಿಗೇ ತಮಗೊದಗಿದ ಅಗಾಧ ಜನಪ್ರಿಯತೆಯನ್ನು ಕನ್ನಡಮ್ಮನ ಸೇವೆಯ ಹೊಣೆಗಾರಿಕೆಯೆಂದೇ ಅನುಕ್ಷಣವೂ ಜೀವಿಸಿದವರು ದೊಡ್ಡರಂಗೇಗೌಡರು. ಅವರ ಸಮಕಾಲೀನರಲ್ಲಿ ಅವರಷ್ಟು ನಾಡಿನುದ್ದಗಲಕ್ಕೂ ಸಂಚರಿಸಿ ಕನ್ನಡಪರ ಸಂಘಟನೆಗಳು, ಸಾಹಿತ್ಯ ಕೂಟಗಳನ್ನು ಪ್ರೇರೇಪಿಸಿದವರ, ಮನೆಮನಗಳನ್ನು ತಾಕಿದವರ ಸಂಖ್ಯೆ ವಿರಳವೇ ಸರಿ. ಕಾವ್ಯ ಸೃಷ್ಟಿಯಲ್ಲಿ ತಪಸ್ವಿಯ ಅಗಾಧ ತನ್ಮಯತೆಯನ್ನೂ, ಸಾಹಿತ್ಯ ಸಂಸ್ಕೃತಿಯ ಪರಿಚಾರಿಕೆಯ ಕೈಂಕರ್ಯಗಳಲ್ಲಿ ಜಂಗಮರೂಪಿ ಅಭೀಪ್ಸೆಯನ್ನು ಹೊತ್ತೇ ಬದುಕಿರುವ ಗೌಡರು ಮತ್ತೆ ಮತ್ತೆ ನಮ್ಮ ಮನಃಪಟಲದಲ್ಲಿ ನಿಲ್ಲುವುದು ಭೂಮಿತೂಕದ ಅವರ ಸೌಜನ್ಯದಿಂದ, ಕನ್ನಡಕ್ಕೆ ಕೊಡದ ಒಂದರೆಗಳಿಗೆಯೂ ತನಗೆ ಬೇಡ ಎನ್ನುವ ಕಾರ್ಯತತ್ಪರತೆಯ ದೀಕ್ಷೆಯಿಂದ.

**ಎಲ್ಲಾ ಮೇಲು ಕೀಳು**
**ಸುಳ್ಳು ಭೇದ ಭಾವ**
**ಬಗೆದಾ ಮನುಜಾ ಕಾಣೋ**? ಎನ್ನುವ ಆಲೆಮನೆ ಚಿತ್ರದ ಅವರ ಗೀತೆಯ ಅನನ್ಯವಾದ ಒಂದು ಪಂಕ್ತಿ ಹೀಗಿದೆ:

**ಜಾತಿ ಮತದ ಕಲಹ ಬೇಡ**
**ನೀತಿ ಇರದ ಬಾಳು ದಂಡ**
**ವಿಷ ದಾರಿ ತುಳಿಯೆ ದುಗುಡ**
**ನಡೆಯಯ್ಯ ಒಳಿತು ಜಾಡ**

ಹೀಗೆ ಈ ಮಣ್ಣಿನ ವಿವೇಕವನ್ನು ಅದೇ ಸಹಜತೆಯಲ್ಲಿ, ಸರಳತೆಯಲ್ಲಿ ಅಕ್ಷರಗಳಿಗೆ, ಕಿವಿಗಳಿಗೆ, ಎದೆಗಳಿಗೆ ದಾಟಿಸಿದ ಇಂಪು ತಂಪಿನ ಕವಿ ದೊಡ್ಡರಂಗೇಗೌಡರ 'ಹೂವಂಥ ಮನಸನ್ನು' ಹಿಂಡುವ ಕಿಡಿಗೇಡಿತನವನ್ನು ಬಿಟ್ಟು ಅವರು ಈ ನಾಡುನುಡಿಗೆ, ಈ ಮಣ್ಣಿಗೆ ನೀಡಿದ ಕಾಣ್ಕೆಗಳನ್ನು ಸಂಭ್ರಮಿಸುತ್ತಾ ಕನ್ನಡಮ್ಮನ ತೇರು ಎಳೆಯಲು ಎಲ್ಲರೂ ಒಗ್ಗೂಡೋಣ. ■

# ಗಡಿ ವಿಚಾರ, ನಮ್ಮಲ್ಲೇ ಇದೆ ಪರಿಹಾರ


>> ೩ನೇ ಪುಟದಿಂದ...

ನ್ಯಾಯಮೂರ್ತಿಗಳಾದ ಮಹಾಜನ್ ಹಾಗೂ ಇತರೆ ಪರಿಣಿತರ ತಂಡ ಗಡಿ ಭಾಗದ ಅಧ್ಯಯನ ನಡೆಸಿ ಕನ್ನಡ ಭಾಷಿಕರು ಹೆಚ್ಚಿರುವ ಆಧಾರದಲ್ಲಿ ಬೆಳಗಾವಿಯು ಕರ್ನಾಟಕದಲ್ಲೇ ಉಳಿಯಬೇಕೆಂಬ ತೀರ್ಪನ್ನು ನೀಡಿತು.

ಸಮಿತಿಯವರು ಗಡಿಭಾಗದ ಎಲ್ಲ ಊರುಗಳನ್ನು ಭೇಟಿ ಮಾಡಿ ಅಲ್ಲಿನ ಸಂಘ ಸಂಸ್ಥೆಗಳ, ಜನಸಾಮಾನ್ಯರ ಅಭಿಪ್ರಾಯವನ್ನು ಸಂಗ್ರಹಿಸಿದರು. ಒಟ್ಟು ೨೨೪೦ ಮನವಿಗಳನ್ನು ಸ್ವೀಕರಿಸಿಕೊಂಡ ಸಮಿತಿ ಮಹಾಜನ್ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತು. ಬೆಳಗಾವಿ ಕರ್ನಾಟಕದಲ್ಲೇ ಉಳಿಯಬೇಕು. ಜತ್ತ, ಅಕ್ಕಲಕೋಟೆ, ಸೊಲ್ಲಾಪುರವೂ ಸೇರಿದಂತೆ ಒಟ್ಟು ೨೪೭ ಹಳ್ಳಿಗಳು ಕರ್ನಾಟಕಕ್ಕೆ ಸೇರಬೇಕು. ನಂದಗಡ, ನಿಪ್ಪಾಣಿ, ಖಾನಾಪುರ ಸೇರಿದಂತೆ ೨೬೪ ಹಳ್ಳಿಗಳು ಮಹಾರಾಷ್ಟ್ರಕ್ಕೆ ಸೇರಬೇಕು. ಕಾಸರಗೋಡು ಕರ್ನಾಟಕಕ್ಕೆ ಸೇರಬೇಕು ಎನ್ನುವ ಪ್ರಮುಖ ಶಿಫಾರಸುಗಳನ್ನು ಮಾಡಿತ್ತು. ಆದರೆ ಇದನ್ನು ಮಹಾರಾಷ್ಟ್ರ ಒಪ್ಪಲು ತಯಾರಿರಲಿಲ್ಲ. ಫಜಲ್ ಅಲಿ ಆಯೋಗ ಸಹ ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗವೆಂದು ಹೇಳಿದ್ದು ಎಂಇಎಸ್ ಮಾತ್ರ ಯಾವುದೇ ಆಯೋಗದ ವರದಿಗಳನ್ನು ಪುರಸ್ಕರಿಸದೇ ತನ್ನ ವಾದವನ್ನು ಮುನ್ನಡೆಸುತ್ತ ಬಂದಿದೆ. ನಂತರದ ದಿನಗಳಲ್ಲಿ ವಿವಿಧ ಸಂಘಟನೆಗಳ ನೇತೃತ್ವದಲ್ಲಿ ಕನ್ನಡ ಚಳವಳಿಗರ ಸಂಘ ಅಸ್ತಿತ್ವಕ್ಕೆ ಬಂದಿತು. ಬೆಳಗಾವಿ ನಗರದ ಎಲ್ಲ ಸರಕಾರಿ ಕಚೇರಿ ಹಾಗೂ ಅಂಗಡಿಗಳ ಮೇಲೆ ಮರಾಠಿ ಹೆಸರು ಬದಲು ಕನ್ನಡ ಹೆಸರನ್ನು ಬರೆಸಬೇಕು ಎಂದು ಈ ಸಂಘ ಸರಕಾರವನ್ನು ಆಗ್ರಹಿಸಿತು. ಈವರೆಗೆ ಕರ್ನಾಟಕ – ಮಹಾರಾಷ್ಟ್ರ ಗಡಿ ವಿವಾದಕ್ಕೆ ಸಂಬಂಧಿಸಿದಂತೆ ೪ ಪ್ರತ್ಯೇಕ ಅಧ್ಯಯನಗಳು ನಡೆದಿವೆ. ೧. ಗಡಿನಾಡು ವರದಿ–೨೦೦೦ (ಡಿ.ಎಂ.ನಂಜುಂಡಪ್ಪ), ೨. ಗಡಿನಾಡು ಮಧ್ಯಂತರ ವರದಿ– ೨೦೦೦(ವಾಟಾಳ್ ನಾಗರಾಜ್), ೩. ಗಡಿನಾಡು ಅಧ್ಯಯನ ವರದಿ–೨೦೦೨ (ಪ್ರೊ. ಬರಗೂರು ರಾಮಚಂದ್ರಪ್ಪ), ೪. ಗಡಿಕನ್ನಡಿಗರ ಕಥೆ/ವ್ಯಥೆ–೨೦೦೬ ('ಮುಖ್ಯಮಂತ್ರಿ' ಚಂದ್ರು). ಇದರ ಜತೆಗೆ ಮಳೀಮಠ ಸಮಿತಿ ರಚಿಸಿ ಕರ್ನಾಟಕ ಕೂಡಾ ಗಡಿ ಹೋರಾಟ ನಡೆಸುತ್ತಿದೆ. ಒಂದೆಡೆ ಸುಪ್ರೀಂ ಅಂಗಳದಲ್ಲಿ ಗಡಿ ವಿಚಾರ ಇರುವಾಗ ಮಹಾರಾಷ್ಟ್ರ ಪದೇಪದೇ ಗಡಿಕ್ಯಾತೆ ತೆಗೆಯುತ್ತಲೇ ಕನ್ನಡಿಗರ ತಾಳ್ಮೆ, ಸಹನೆಯನ್ನು ಕೆಣಕುತ್ತಿದೆ.

ಸ್ವಾತಂತ್ರ್ಯ ಪೂರ್ವದಲ್ಲಿ ನಮ್ಮವರ ಉದಾಸೀನದಿಂದಾಗಿ ಸಾಕಷ್ಟು ಪ್ರದೇಶಗಳು ಕರ್ನಾಟಕದಿಂದ ಕೈತಪ್ಪುವಂತಹ ಸ್ಥಿತಿಯನ್ನು ತಂದೊಡ್ಡಿತ್ತು. ಈಗ ಅಂಥಾ ಯಾವುದೇ ಪ್ರಮಾದಕ್ಕೆ ಅವಕಾಶ ಆಗದಂತೆ ಕಾನೂನು, ಆಡಳಿತಾತ್ಮಕ ಮತ್ತು ಸಾಂಸ್ಕೃತಿಕವಾಗಿಯೂ ಅಖಂಡ ಕರ್ನಾಟಕವನ್ನು ಕಟ್ಟಿಕೊಳ್ಳುವ ಪ್ರಯತ್ನಕ್ಕೆ ಸರ್ಕಾರ ಮತ್ತು ಕನ್ನಡಿಗರು ಪ್ರತಿ ಹಂತದಲ್ಲೂ ಕೆಲಸ ಮಾಡಬೇಕಿದೆ.

ಬೆಳಗಾವಿಯಲ್ಲಿರುವ ಜನಪ್ರತಿನಿಧಿಗಳೂ ಕೂಡಾ ಜಿಲ್ಲೆಯಲ್ಲಿ ಕನ್ನಡದ ವಾತಾವರಣ ಸದಾ ಜಾಗೃತವಾಗಿ ಇಡುವಂತಹ ನಿರಂತರ ಕೆಲಸ ಕಾರ್ಯಗಳಿಗೆ ಬೆಂಬಲ ನೀಡಬೇಕಿದೆ. ಬೆಳಗಾವಿ ಸುವರ್ಣ ವಿಧಾನಸೌಧದಲ್ಲಿ ವರ್ಷದಲ್ಲಿ ಕನಿಷ್ಠ ಎರಡು ಬಾರಿ ವಿಧಾನಮಂಡಲ ಅಧಿವೇಶನ ನಡೆಸಬೇಕು. ಸರ್ಕಾರದ ಕೆಲವು ಪ್ರಮುಖ ಕಚೇರಿಗಳನ್ನು ಬೆಳಗಾವಿಗೆ ಸ್ಥಳಾಂತರ ಮಾಡಿ ಅಲ್ಲಿಂದಲೇ ಆಡಳಿತ ನಡೆಯುವಂತೆಹ ಪ್ರಯತ್ನ ಮಾಡಿದರೆ ಮಹಾರಾಷ್ಟ್ರ ತನ್ನ ಗಡಿ ಕ್ಯಾತೆಯನ್ನು ಕೈಬಿಟ್ಟು ತೆಪ್ಪಗೆ ಕೂರಲಿದೆ. ರಾಜಕೀಯವನ್ನು ಪಕ್ಕಕ್ಕಿಟ್ಟು ಇಂಥಾ ಪ್ರಯತ್ನ ಮಾಡಲು ಎಲ್ಲಾ ರಾಜಕೀಯ ಪಕ್ಷಗಳ ಮುಖಂಡರೂ ಒಂದಾಗಬೇಕು. ಆ ಕಾಳಜಿಯ ಕೆಲಸಗಳು ಆಗಿದ್ದೇ ಆದರೆ ಕರ್ನಾಟಕದ ನಾಲ್ಕೂ ದಿಕ್ಕುಗಳಲ್ಲಿ ಗಡಿ ತಂಟೆಗಳು ತನ್ನಿಂದ ತಾನೇ ಮಕಾಡೆ ಮಲಗುತ್ತವೆ. ■





# ಕುವೆಂಪು


ಕುವೆಂಪು ಅವರಿಂದೂ ನಮಗೆ ಪ್ರಸ್ತುತವು ಏಕೆ?
ಕಣ್ಣಿಗೆ ಕಂಡದ್ದೆಲ್ಲವನ್ನೂ ಅಸ್ತುಯೆಂದು ಅಂದು
ಬೇಷರತ್ತಾಗಿ ಒಪ್ಪಿ ಬಾಚಿ ತಬ್ಬಿಕೊಳ್ಳದ್ದಕ್ಕೆ.
ಜಾತಿ ವ್ಯವಸ್ಥೆಯನು ಸಾಮಾಜಿಕ ಪಿಡುಗಿಗೆ
ಕಾರಣವಂದು ಅಂದು ಸದೃಢವಾಗಿ ಗುಡುಗಿದ್ದಕ್ಕೆ.
ಶೂದ್ರರಾಗಿ ಹುಟ್ಟಿ ದರಿದ್ರರ ಎದೆತಟ್ಟಿ
ಅವರನು ಗಟ್ಟಿಯಾಗಿ ಮೇಲೆತ್ತಿ ನಿಲ್ಲಿಸಿದ್ದಕ್ಕೆ.
ಮಲೆನಾಡನು ಎಳೆಎಳೆಯಾಗಿ ತೆಗೆದು ಬಿಡಿಸಿ
ಪ್ರಕೃತಿ ಬಗ್ಗೆ ಅದಮ್ಯ ಪ್ರೀತಿಯನ್ನು ಬೆಳೆಸಿದ್ದಕ್ಕೆ.
ದೇಶ ಕಟ್ಟುವ ಕೆಲಸ ಈಶನ ಸೇವೆಯೆಂದು
ತಮ್ಮೆಲ್ಲಾ ಬರಹವನು ಆ ನಿಟ್ಟಿನಲ್ಲಿ ನಿರ್ವಹಿಸಿದ್ದಕ್ಕೆ.
ನಾಡಿನ ಉನ್ನತಿಗೆ ಸರ್ವೋದಯ ಮಂತ್ರದ ಮೋಡಿಯೇ
ಮಹಾ ಮದ್ದೆಂದು ಸದ್ದಿಲ್ಲದೆ ಸಾರಿದ್ದಕ್ಕೆ.
ಮೈಲಿಗೆಯೆಂದು ನೊಂದು ಊರಾಚೆ ನಿಂತವರ
ಮನವ ತೀಡಿ ತೊಳೆದು ಬೆಚ್ಚನೆ ಬೆಳಗಿಸಿದ್ದಕ್ಕೆ.
ವೈಚಾರಿಕತೆಯ ಬರಹಕ್ಕೆ ಹೆಚ್ಚು ಹೊತ್ತು ಕೊಟ್ಟು
ಆ ರೀತಿ ತಾವೂ ಆಚರಿಸಿ ಇತರರಿಗೆ ದಾರಿ ತೋರಿದ್ದಕ್ಕೆ.
ಪುರಾಣೇತಿಹಾಸ ಪಾತ್ರಗಳಿಗೆ ರಕ್ತಮಾಂಸ ಕೊಟ್ಟು
ಅವುಗಳ ಪ್ರಸ್ತುತತೆಯನ್ನು ಪ್ರಭಾವಯುತವಾಗಿ ಚಿತ್ರಿಸಿದ್ದಕ್ಕೆ.
ವಿಶ್ವದ ಎಲ್ಲಾ ದರ್ಶನಗಳಿಗೂ ತಮ್ಮ ಹೃದಯ ತೆರೆದು
ಅವುಗಳ ಆದರ್ಶವನು ನಮಗೂ ಸ್ಪರ್ಶಿಸುವಂತೆ ಮಾಡಿದ್ದಕ್ಕೆ.
ಪಾಶ್ಚಾತ್ಯ ಸಾಹಿತ್ಯವನು ಈ ನೆಲದ ಆಶಯಕ್ಕೆ
ಸಶಕ್ತವಾಗಿ, ಸೂಕ್ತವಾಗಿ ಬಳಸಿಕೊಂಡಿದ್ದಕ್ಕೆ.
ವಿಮರ್ಶಾ ಪ್ರಜ್ಞೆ ಈ ನಾಡಿನ ಮೂಲೆಮೂಲೆಯಲಿ
ಮನೋಜ್ಞವಾಗಿ ಆಳವಾಗಿ ಬೆಳೆಯುವುದಕೆ ಸಹಕರಿಸಿದ್ದಕ್ಕೆ.
ನಿರಾಕಾರ ತಂದೆಯು ನೀಡಿದ ಪವಿತ್ರ ಪಾತ್ರವನು
ನಿಮಿತ್ತ ಭಾವದಿ ಅಂದವಾಗಿ ಮಾಡಿ ಮುಗಿಸಿದ್ದಕ್ಕೆ.


■ ಪಿ. ಮಲ್ಲಿಕಾರ್ಜುನಪ್ಪ, ಮೊ. ೯೬೮೬೪೦೯೨೮೬


# ಕನ್ನಡ ಸಾಹಿತ್ಯ ಪರಿಷತ್ತಿನ ಇತಿಹಾಸದಲ್ಲೆ ಪ್ರಥಮ ಬಾರಿಗೆ ದಲಿತ ಸಾಹಿತ್ಯದ ವಿವಿಧ ಪ್ರಕಾರಗಳ ಸಂಪುಟಗಳ ಪ್ರಕಟಣೆ





**ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ವಿಷಯಗಳಿಗೆ ಸಂಬಂಧಿಸಿದ ವಿವಿಧ ಪ್ರಾಕಾರಗಳ ಸಂಪುಟಗಳನ್ನು ಭಾರತದ ಭಾಷಾ ಸಾಹಿತ್ಯದ ಇತಿಹಾಸದಲ್ಲೇ ಮೊದಲೆಂಬಂತೆ ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿದೆ. ನಾಡೋಜ ಡಾ. ಮನು ಬಳಿಗಾರ್ ಅವರ ಪ್ರಧಾನ ಸಂಪಾದಕತ್ವದಲ್ಲಿ, ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಅವರ ಸಂಪಾದಕತ್ವದಲ್ಲಿ 'ಸಂಶೋಧನೆ', ಡಾ. ಸಣ್ಣರಾಮ ಅವರ ಸಂಪಾದಕತ್ವದಲ್ಲಿ 'ಸಣ್ಣಕಥೆ', ಪ್ರೊ. ಹೆಚ್.ಟಿ. ಪೋತೆ ಅವರ ಸಂಪಾದಕತ್ವದಲ್ಲಿ 'ಜಾನಪದ' ಸಂಪುಟಗಳನ್ನು ಬಿಡುಗಡೆಗೊಳಿಸಲಾಗಿತ್ತು. ಈಗ ಟಿ. ಯಲ್ಲಪ್ಪ ಅವರ ಸಂಪಾದಕತ್ವದಲ್ಲಿ 'ಆತ್ಮಚರಿತ್ರೆ', ಡಾ. ಸತ್ಯಮಂಗಲ ಮಹದೇವ ಅವರ ಸಂಪಾದಕತ್ವದಲ್ಲಿ 'ವಿಮರ್ಶೆ', ಡಾ. ಮೂಡ್ನಾಕೂಡು ಚಿನ್ನಸ್ವಾಮಿ ಅವರ ಸಂಪಾದಕತ್ವದಲ್ಲಿ 'ಕಾವ್ಯ' ಹಾಗೂ ಡಾ. ಅಣ್ಣಮ್ಮ ಅವರ ಸಂಪಾದಕತ್ವದಲ್ಲಿ 'ಅಂಕಣ ಬರಹ' ಸಂಪುಟಗಳನ್ನು ಪ್ರಕಟಿಸಲಾಗಿದೆ.**

# ಸಾದರ ಸ್ವೀಕಾರ

**ನವಕರ್ನಾಟಕ ಪ್ರಕಾಶನ, ಬೆಂಗಳೂರು-ಇವರ ಪ್ರಕಟಣೆಗಳು**

**ಕಸದಿಂದ ಅದ್ಭುತ ಆಟಿಕೆಗಳು ಮತ್ತು ಪ್ರಯೋಗಗಳು**
**ಅನು : ರೇಷ್ಮಾ ಬಾರ್ವೆ**
ಪು : ೫೬ ಬೆಲೆ : ರೂ. ೬೫=೦೦

**ವಿಜ್ಞಾನದಲ್ಲಿ ಮೋಜು**
**ಅನು : ರೇಷ್ಮಾ ಬಾರ್ವೆ**
ಪು : ೬೦ ಬೆಲೆ : ರೂ. ೬೫=೦೦

**ಭಗವದ್ಗೀತೆ ಒಂದು ಅವಲೋಕನ**
**ಲೇ : ಡಾ. ಜಿ. ರಾಮಕೃಷ್ಣ**
ಪು : ೧೬೪ ಬೆಲೆ : ರೂ. ೧೫೦=೦೦

**ಕಾರ್ಲ್ ಮಾರ್ಕ್ಸ್ ಭಾರತವನ್ನು ಕುರಿತು**
**ಅನು : ವಿಶ್ವ ಕುಂದಾಪುರ**
ಪು : ೧೨೦ ಬೆಲೆ : ರೂ. ೧೨೫=೦೦

**ಇಂಗ್ಲಿಷ್ ನುಡಿಗಟ್ಟು ಮತ್ತು ಪಡೆನುಡಿಗಳ ವಿವರಣಾತ್ಮಕ ಕೋಶ**
**ಲೇ : ಬೇದ್ರೆ ಮಂಜುನಾಥ**
ಪು : ೧೮೦ ಬೆಲೆ : ರೂ. ೧೦೦=೦೦

**ಮಕ್ಕಳ ಪಾಲನೆ ಆರೋಗ್ಯ**
ಲೇ : ಡಾ॥ ಎಂ.ಡಿ. ಸೂರ್ಯಕಾಂತ
ಪು : ೧೨೦ ಬೆಲೆ : ರೂ. ೧೨೫=೦೦

**ದೇವ್ರ ಮಗಳು ಮತ್ತು ಇತರ ಕಥೆಗಳು**
ಲೇ : ಅಕ್ಬರ್ ಸಿ. ಕಾಲಿಮಿರ್ಚಿ
ಪು : ೮೮ ಬೆಲೆ : ರೂ. ೮೦=೦೦

**ಬಂದೂಕಿಗೆ ಜೀವವಿಲ್ಲ**
ಲೇ : ಅಕ್ಬರ ಸಿ. ಕಾಲಿಮಿರ್ಚಿ
ಪು : ೯೬ ಬೆಲೆ : ರೂ. ೯೦=೦೦

**ಹಿಂದೂ ಅಸ್ಮಿತೆಗಾಗಿ ಹುಡುಕಾಟ**
ಅನು : ಪ್ರದೀಪ ಕುಮಾರ ಶೆಟ್ಟಿ ಕೆ.
ಪು : ೭೨ ಬೆಲೆ : ರೂ. ೮೦=೦೦

**ಸೋತು ಗೆದ್ದ ಮನುಷ್ಯ**
ಲೇ : ಕಸ್ತೂರಿ
ಪು : ೧೫೨ ಬೆಲೆ : ರೂ. ೧೧೫=೦೦

**ಸೃಜನಶೀಲ ಶಿಕ್ಷಣ**
ಲೇ : ಡಾ. ಮಹಾಬಲೇಶ್ವರ ರಾವ್
ಪು : ೧೩೬ ಬೆಲೆ : ರೂ. ೧೦೦=೦೦

**ನೆರೆಯ ಬಿಂಬಗಳು**
ಲೇ : ಬಿ. ಎಸ್. ಮಯೂರ
ಪು : ೯೬ ಬೆಲೆ : ರೂ. ೭೫=೦೦

**ಕೃಷಿ ವಿಜ್ಞಾನ**
ಲೇ : ಡಾ. ಜಿ.ಕೆ.ವೀರೇಶ್, ಅಡ್ಡೂರು ಕೃಷ್ಣರಾವ್
ಪು : ೧೨೦ ಬೆಲೆ : ರೂ. ೭೫=೦೦

**ನನ್ನವಳು**
**ಲೇ : ವೀರಪ್ಪ ಮ. ನಿಂಗೋಜಿ**
ಪು : ೬೪ ಬೆಲೆ : ರೂ. ೬೦=೦೦
ಪ್ರ : ಲಲಿತಾ ಪ್ರಕಾಶನ, ಕರಮುಡಿ, ಯಲಬುರ್ಗಾ ತಾ.

**ಸಂಶೋಧನೆ**
**ಸಂ. : ಜಾಜಿ ದೇವೇಂದ್ರಪ್ಪ**
ಪು : ೭೨೦ ಬೆಲೆ : ರೂ. ೧೫೦=೦೦
ಪ್ರ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕೊಪ್ಪಳ

**ಶ್ರೀಕಾರ**
**ಸಂ. : ಸಿದ್ಧಯ್ಯ ಪುರಾಣಿಕ, ರಾಘವೇಂದ್ರ ಪುರಾಣಿಕ**
ಪು : ೧೧೯ ಬೆಲೆ : ರೂ. ೧೦೦=೦೦
ಪ್ರ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕೊಪ್ಪಳ

**ಕೊಪ್ಪಳ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮಾಹಿತಿ ಕೋಶ**
**ಸಂ. : ಅಕ್ಬರ್ ಸಿ. ಕಾಲಿಮಿರ್ಚಿ, ಶಿ.ಕಾ. ಬಡಿಗೇರ**
ಪು : ೨೩೬ ಬೆಲೆ : ರೂ. ೧೫೦=೦೦
ಪ್ರ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕೊಪ್ಪಳ

**ಅಂಕಣ-ಕಂಕಣ, ಭಾಗ-೨**
**ಲೇ : ಅ.ಸಿ. ಹಿರೇಮಠ**
ಪು : ೧೦೨ ಬೆಲೆ : ರೂ. ೧೦೦=೦೦
ಪ್ರ : ಸುಬೋಧ ಪ್ರಕಾಶನ, ರಾಣೇಬೆನ್ನೂರು

**ಕೃತಕ ಉಪಗ್ರಹಗಳ ಗುಣಮಟ್ಟ ದೃಢೀಕರಣ- ರೀತಿ, ನೀತಿ**
**ಲೇ : ಬಿ. ಪ್ರಭಾಕರ ವರ್ಣ**
ಪು : ೯೮ ಬೆಲೆ : ರೂ. ೮೦=೦೦
ಪ್ರ : ಹೇಮಂತ ಸಾಹಿತ್ಯ, ಬೆಂಗಳೂರು

**ಆಚಾರ್ಯ ವಿನೋಬಾ ಭಾವೆ**
**ಲೇ : ಎಫ್.ಪಿ. ಲಕ್ಷ್ಮೇಶ್ವರಮಠ**
ಪು : ೪೪ ಬೆಲೆ : ರೂ. ೧೫=೦೦
ಪ್ರ : ವಿದ್ಯಾನಿಧಿ ಪ್ರಕಾಶನ, ಗದಗ

**ಸರ್ದಾರ ವಲ್ಲಭಬಾಯಿ ಪಟೇಲ**
**ಲೇ : ಎಫ್.ಪಿ. ಲಕ್ಷ್ಮೇಶ್ವರಮಠ**
ಪು : ೬೨ ಬೆಲೆ : ರೂ. ೨೦=೦೦
ಪ್ರ : ವಿದ್ಯಾನಿಧಿ ಪ್ರಕಾಶನ, ಗದಗ

**ಡಾ. ಶಿವರಾಮ ಕಾರಂತ**
**ಲೇ : ಎಫ್.ಪಿ. ಲಕ್ಷ್ಮೇಶ್ವರಮಠ**
ಪು : ೫೪ ಬೆಲೆ : ರೂ. ೨೦=೦೦
ಪ್ರ : ವಿದ್ಯಾನಿಧಿ ಪ್ರಕಾಶನ, ಗದಗ

**ಲೋಕನಾಯಕ ಜಯಪ್ರಕಾಶ ನಾರಾಯಣ**
**ಲೇ : ಎಫ್.ಪಿ. ಲಕ್ಷ್ಮೇಶ್ವರಮಠ**
ಪು : ೪೦ ಬೆಲೆ : ರೂ. ೧೫=೦೦
ಪ್ರ : ವಿದ್ಯಾನಿಧಿ ಪ್ರಕಾಶನ, ಗದಗ

**ಹುಡುಕಾಟ**
**ಲೇ : ಶಾಂತಾರಾಮ ನಾಯಕ, ಹಿಚಕಡ**
ಪು : ೨೨೬ ಬೆಲೆ : ರೂ. ೧೫೦=೦೦
ಪ್ರ : ಶಾಂತಾರಾಮ ನಾಯಕ, ಹಿಚಕಡ, ಅಂಕೋಲಾ, ಉತ್ತರ ಕನ್ನಡ - ೫೮೧೩೧೪

**ಅಸ್ತಿತ್ವ**
**ಲೇ : ಅಶ್ವತ್ಥ ಕಲ್ಲೇದೇವರಹಳ್ಳಿ**
ಪು : ೧೧೬ ಬೆಲೆ : ರೂ. ೧೦೦=೦೦
ಪ್ರ : ಅಶ್ವತ್ಥ ಪುಸ್ತಕ ಮನೆ, ಕಲ್ಲೇದೇವರಹಳ್ಳಿ, ಕುಂಕಾನಾಡು ಅಂಚೆ, ಕಡೂರು ತಾ. ಚಿಕ್ಕಮಗಳೂರು ಜಿಲ್ಲೆ - ೫೭೩೧೮೨

**ದೇವಸೂಗೂರಿನ ಗ್ರಾಮದೇವತೆ ನಾಗರ ಎಲ್ಲಮ್ಮ**
**ಸಂ : ಡಾ. ರಾಜಶ್ರೀ ಕಿಶೋರ**
ಪು : ೧೦೭ ಬೆಲೆ : ರೂ. ೧೦೦=೦೦
ಪ್ರ : ಶ್ರೀ ಮಾತಾ ನಾಗರ ಎಲ್ಲಮ್ಮ ದೇವಸ್ಥಾನ ಸೇವಾ ಸಮಿತಿ (ರಿ), ದೇವಸೂಗೂರು.

**ದೇವಸೂಗೂರಿನ ಶ್ರೀ ಸೂಗೂರೇಶ್ವರರು ಒಂದು ಸಾಂಸ್ಕೃತಿಕ ಅಧ್ಯಯನ**
**ಸಂ : ಡಾ. ರಾಜಶ್ರೀ ಕಿಶೋರ**
ಪು : ೫೦೪ ಬೆಲೆ : ರೂ. ೫೦೦=೦೦
ಪ್ರ : ಶ್ರೀ ರಮೇಶ ಅಜಗರಣಿ ಮತ್ತು ಶ್ರೀಮತಿ ವಿಜಯಲಕ್ಷ್ಮಿ ಅಜಗರಣಿ, ಮಕ್ತಲ್ ಪೇಟೆ, ಕುಂಬಾರ ಓಣಿ, ಶ್ರೀ ವೀರಭದ್ರ ದೇವಸ್ಥಾನ ಹತ್ತಿರ, ರಾಯಚೂರು

**ಅಭಿವ್ಯಕ್ತಿ (ಲೇಖನಗಳು)**
**ಲೇ : ಡಾ. ಉಪ್ಪಂಗಳ ರಾಮಭಟ್ಟ**
ಪು : ೨೮೮ ಬೆಲೆ : ರೂ. ೨೫೦=೦೦
ಪ್ರ : ಅಕಳಂಕ ಪ್ರತಿಷ್ಠಾನ(ರಿ), ಉಡುಪಿ

**Kannada Nudi:** AUGUST 2020 - JANUARY 2021, "Registered with the registrar of Newspaper of in India under serial No: KARKAN/13252/1967"




ಕನ್ನಡ ನುಡಿ (ಮಾಸ ಪತ್ರಿಕೆ)
KANNADA NUDI MONTHLY
ಕನ್ನಡ ಸಾಹಿತ್ಯ ಪರಿಷತ್ತು
KANNADA SAHITHYA PARISHAT
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦ ೦೧೮
Pampa Mahakavi Road, Chamarajpete, Bengaluru-560 018.

ಸಂಪಾದಕರು : ಬಿ.ಎನ್. ರಮೇಶ್, ಪ್ರಕಾಶಕರು : ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು – ೫೬೦೦೧೮
ಮುದ್ರಣ : ಬಿ.ಎಂ.ಶ್ರೀ ಅಚ್ಚುಕೂಟ ಆಫ್‌ಸೆಟ್, ಪಂಪ ಮಹಾಕವಿ ರಸ್ತೆ , ಚಾಮರಾಜಪೇಟೆ, ಬೆಂಗಳೂರು – ೫೬೦ ೦೧೮